ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ BENGALURU CENTRAL UNIVERSITY
Central College Campus, Dr. B.R. AmbedkarVeedhi, Bengaluru – 560 001.
Ph. No.: 080 – 22131385, E-Mail:registrarbcu@gmail.com / bcuccb@gmail.com

ಸಂಖ್ಯೆ: ಬಿಸಿಯು/ ಎಸ್‌ವೈಎನ್ / ಅಸಾಮಾನ್ಯ ಸಭೆ/ 35 / 2020-21 ದಿನಾಂಕ: 24.06.2020.

ಗೆ,

ಮಾನ್ಯ ಸಿಂಡಿಕೇಟ್ ಸದಸ್ಯರು,
ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ,
ಬೆಂಗಳೂರು

ಮಾನ್ಯರೆ

**ವಿಷಯ: ದಿನಾಂಕ: 05.06.2020 ಹಾಗೂ 16.06.2020 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಗಳ ನಡಾವಳಿಗಳು.**

***

ದಿನಾಂಕ: 05.06.2020 ಹಾಗೂ 16.06.2020 ರಂದು ಪೂರ್ವಾಹ್ನ 11-00 ಗಂಟೆಗೆ ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಗಳ ನಡಾವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 5.16 ರನ್ವಯ ಕಳುಹಿಸುತ್ತಿದ್ದೇನೆ.

ನಡಾವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡಾವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾವಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

24/06/2020

ಕುಲಸಚಿವರು

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು-1.
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ. ಬಿಸಿಯು.
4. ಕಛೇರಿ ಪ್ರತಿ / ರಕ್ಷಣಾ ಕಡತ

Sent on 25/5/2020

ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ
BENGALURU CENTRAL UNIVERSITY
Central College Campus, Dr. B.R. AmbedkarVeedhi, Bengaluru – 560 001.
Ph. No.: 080 – 22131385, E-Mail:registrarbcu@gmail.com / bcuccb@gmail.com

ಸಂಖ್ಯೆ: ಬಿಸಿಯು/ ಎಸ್‌ವೈಎನ್/ ಅಸಾಮಾನ್ಯ ಸಭೆ/35/2020-21 ದಿನಾಂಕ: 23.06.2020.

ದಿನಾಂಕ 05.06.2020 ರಂದು ಪೂರ್ವಾಹ್ನ 11.00 ಗಂಟೆಗೆ ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು 560 001 ಇಲ್ಲಿ ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡಾವಳಿಗಳು.

**ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ. ಎಸ್. ಜಾಫ್ಲೆಟ್, ಕುಲಪತಿಗಳು | ಸಭಾಧ್ಯಕ್ಷರು |
| 2. | ಶ್ರೀ. ಕೆ. ಪ್ರಸಾದ್, ಜಂಟಿ ನಿರ್ದೇಶಕರು<br>ಕಾಲೇಜು ಶಿಕ್ಷಣ ಇಲಾಖೆ ಆಯುಕ್ತರ ಪರವಾಗಿ | ಸದಸ್ಯರು |
| 3. | ಶ್ರೀ ಆರ್. ಮಂಜುನಾಥ್, ಜಂಟಿ ನಿರ್ದೇಶಕರು<br>ತಾಂತ್ರಿಕ ಶಿಕ್ಷಣ ನಿರ್ದೇಶಕರ ಪರವಾಗಿ | ಸದಸ್ಯರು |
| 4. | ಶ್ರೀ ನರಸಿಂಹಪ್ಪ, ಸಿ.ಎ.ಓ,<br>ವೈದ್ಯಕೀಯ ಶಿಕ್ಷಣ ಇಲಾಖೆ ನಿರ್ದೇಶಕರ ಪರವಾಗಿ | ಸದಸ್ಯರು |
| 5. | ಡಾ: ಹೆಚ್.ಟಿ. ಅರವಿಂದ್ | ಸದಸ್ಯರು |
| 6. | ಶ್ರೀ ಹೆಚ್.ಆರ್. ಸತೀಶ್ | ಸದಸ್ಯರು |
| 7. | ಶ್ರೀ ಕರಣ್‌ಕುಮಾರ್ | ಸದಸ್ಯರು |
| 8. | ಶ್ರೀ ಹೆಚ್.ಎನ್. ಹರಿಪ್ರಸಾದ | ಸದಸ್ಯರು |
| 9. | ಶ್ರೀಮತಿ ಜ್ಯೋತಿ ವಿಜಯ್ | ಸದಸ್ಯರು |
| 10. | ಶ್ರೀ ಟಿ.ಹೆಚ್. ಶ್ರೀನಿವಾಸಯ್ಯ | ಸದಸ್ಯರು |
| 11. | ಡಾ. ಆರ್.ಕೆ. ಚಂದ್ರನಾಥ್ | ಸದಸ್ಯರು |
| 12. | ಶ್ರೀ ಥಾಮಸ್ ನೀಲಿಯಾರ | ಸದಸ್ಯರು |
| 13. | ಡಾ. ಬಿ.ಎ. ಅನುರಾಧಾ | ಸದಸ್ಯರು |
| 14. | ಡಾ. ಆರ್. ಪಾರ್ವತಿ | ಸದಸ್ಯರು |
| 15. | ಡಾ. ಇ.ಬಿ.ರಾಜೇಶ್ | ಸದಸ್ಯರು |

16. ಶ್ರೀ ಡಿ.ಜಿ. ಶ್ರೀನಿವಾಸಮೂರ್ತಿ — ಸದಸ್ಯರು

17. ಡಾ: ಎಂ. ಪಾಂಡುರಂಗಪ್ಪ — ಸದಸ್ಯರು

18. ಡಾ. ವಿ.ಆರ್. ದೇವರಾಜು — ಸದಸ್ಯರು

19. ಪ್ರೊ. ಬಿ. ರಮೇಶ್, ಕುಲಸಚಿವರು (ಮೌಲ್ಯಮಾಪನ) — ಸದಸ್ಯರು

20. ಶ್ರೀ ಪಿ. ಕುಮಾರ್, ಕುಲಸಚಿವರು — ಸದಸ್ಯ ಕಾರ್ಯದರ್ಶಿಗಳು

ಕುಲಸಚಿವರು ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಸದಸ್ಯರನ್ನು ಸ್ವಾಗತಿಸಿ ಕಾರ್ಯಸೂಚಿಯನ್ನು ಚರ್ಚೆಗೆ ತೆಗೆದುಕೊಂಡರು.

| | |
|---|---|
| ವಿಷಯ ಸಂಖ್ಯೆ–1 | ರಸಾಯನಶಾಸ್ತ್ರ ವಿಭಾಗಕ್ಕೆ ಅಧ್ಯಾಪಕರುಗಳನ್ನು ನೇಮಿಸುವ ಬಗ್ಗೆ.<br><br>ಗೌರವಾನ್ವಿತ ಸದಸ್ಯರು, ವಿಜ್ಞಾನ ನಿಕಾಯದ ಡೀನರು ಹಾಗೂ ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿರುವ ಡಾ. ಎಂ. ಪಾಂಡುರಂಗಪ್ಪನವರು, ವಿಭಾಗದ ಇತಿಹಾಸ, ಪರಂಪರೆ ಹಾಗೂ ವಿಭಾಗದಲ್ಲಿ ಸೇವೆ ಸಲ್ಲಿಸಿದ ಖ್ಯಾತ ವಿಜ್ಞಾನಿಗಳ ಮತ್ತು ವಿದ್ವಾಂಸರ ವಿವರ ನೀಡಿ ಭಾರತರತ್ನ ಡಾ: ಸಿ.ಎನ್.ಆರ್. ರಾವ್ ಅವರು ಸಹ ಈ ವಿಭಾಗದ ಸಂಬಂಧ ಹೊಂದಿದ್ದರೆಂದು ಸಭೆಗೆ ಮಾಹಿತಿ ನೀಡಿದರು. ರಸಾಯನಶಾಸ್ತ್ರ ವಿಭಾಗ ಮೂರು ಅಂತರ ವಿಭಾಗಗಳನ್ನು ಹೊಂದಿದ್ದು, ಯುಜಿಸಿ ನಿಯಮಾವಳಿಗಳ ಪ್ರಾಕಾರ 3 ಪ್ರಾಧ್ಯಾಪಕರು, 6 ಸಹಪ್ರಾಧ್ಯಾಪಕರು ಹಾಗೂ 12 ಸಹಾಯಕ ಪ್ರಾಧ್ಯಾಪಕರು ಹೀಗೆ ಒಟ್ಟು 21 ಜನ ಶಿಕ್ಷಕ ವೃಂದ ಇರಬೇಕಾಗುತ್ತದೆ. ಆದರೇ ಪ್ರಸ್ತುತ 5 ಜನ ಪ್ರಾಧ್ಯಾಪಕರು ಮಾತ್ರ ಕೆಲಸ ನಿರ್ವಹಿಸುತ್ತಿದ್ದು, ಅನುಭವಿ ಹಾಗೂ ಖಾಯಂ ಅಧ್ಯಾಪಕರ ಕೊರತೆಯಿಂದಾಗಿ ವ್ಯಾಸಂಗದ ಗುಣಮಟ್ಟದ ಮೇಲೆ ಪ್ರಭಾವ ಬೀರಿದೆ. ಅತಿಥಿ ಉಪನ್ಯಾಸಕರಿಂದ ಗುಣಮಟ್ಟದ ಬೋಧನೆ ನಿರೀಕ್ಷಿಸಲಾಗದೆಂದು ತಿಳಿಸಿ, ಯುಜಿಸಿ ನಿಯಮಗಳ ಪ್ರಕಾರ ಅಗತ್ಯವಿರುವ ಇನ್ನು 16 ಹುದ್ದೆಗಳನ್ನು ಸೃಜಿಸಲು ಸಭೆಯ ಅನುಮೋದನೆ ಕೋರಿದರು.<br><br>ಗೌರವಾನ್ವಿತ ಸದಸ್ಯರಾದ ಡಾ. ಕೆ. ಆರ್. ಚಂದ್ರನಾಥ ರವರು, ಪೂರ್ಣಾವಧಿ ಶಿಕ್ಷಕರು ಇಲ್ಲದಿದ್ದರೆ ಗುಣಾತ್ಮಕ ಶಿಕ್ಷಣ ನೀಡಲು ಸಾಧ್ಯವಾಗುವುದಿಲ್ಲ ಮತ್ತು ಇದರಿಂದ ವಿಭಾಗದ ಪ್ರವೇಶ ಸಂಖ್ಯೆ ಕಡಿಮೆಯಾಗುತ್ತದೆ ಎಂದು ತಿಳಿಸಿ, ರಸಾಯನಶಾಸ್ತ್ರ ವಿಭಾಗಕ್ಕೆ ಅಗತ್ಯವಾದ ಹುದ್ದೆಗಳನ್ನು ಹಾಗೂ ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕೆಂದು ತಿಳಿಸಿದರು.<br><br>ಗೌರವಾನ್ವಿತ ಸದಸ್ಯರಾದ ಶ್ರೀ ಕರಣಕುಮಾರ್ ರವರು, ರಸಾಯನಶಾಸ್ತ್ರ ವಿಭಾಗ ಈ ವಿಶ್ವವಿದ್ಯಾಲಯದ ಪ್ರಮುಖ ವಿಭಾಗವಾಗಿದ್ದು, ಇದು ಒಂದು ಮಾದರಿ ವಿಭಾಗವಾಗಿ ಬೆಳೆಯಬೇಕಾಗಿದೆ. ಕಾರ್ಪೋರೇಟ್ ಸಂಸ್ಥೆಗಳಿಂದ ಈ ವಿಭಾಗದ ಅಭಿವೃದ್ಧಿಗೆ ಸಹಾಯ ಪಡೆಯಬೇಕು ಹಾಗೂ ಮುಂದಿನ 10 ವರ್ಷಗಳಲ್ಲಿ ಈ ವಿಭಾಗ ಬೆಳೆಯಬೇಕಾದ ದಿಕ್ಸೂಚಿಯ ರೂಪುರೇಷೆಗಳನ್ನು ಸಿದ್ಧಪಡಿಸಿ, ಪುನರುಜ್ಜೀವನಗೊಳಿಸಿ ಶ್ರೇಷ್ಠ ಮಟ್ಟದ ಸಂಶೋಧನಾ ಸಂಸ್ಥೆಯಾಗಿ ರೂಪಿಸಲು ಒಂದು ಸಮಿತಿ ರಚಿಸಬೇಕು. ಅದು ಸಿದ್ಧಪಡಿಸುವ ಯೋಜನಾ ವರದಿಯಂತೆ ಮೂಲ ಸೌಕರ್ಯ ಒದಗಿಸಲು ಧನಸಹಾಯಕ್ಕಾಗಿ ಪ್ರಯತ್ನಿಸಬೇಕೆಂದು ತಿಳಿಸಿದರು |

| | |
|---|---|
| | ಗೌರವಾನ್ವಿತ ಸದಸ್ಯರಾದ ಡಾ. ವಿ.ಆರ್. ದೇವರಾಜ್ ಹಾಗೂ ಡಾ. ಇ.ಬಿ. ರಾಜೇಶ್ ಚರ್ಚೆಯಲ್ಲಿ ಪಾಲ್ಗೊಂಡು ರಸಾಯನಶಾಸ್ತ್ರ ವಿಭಾಗ ಉತ್ತಮ ಸಂಶೋಧನೆಗಳಿಂದ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿದೆ. ಶಿಕ್ಷಕರ ಅನುಪಸ್ಥಿತಿಯಿಂದ ಸಂಶೋಧನೆ ಕುಂಠಿತವಾಗಿದೆ ಎಂದು ತಿಳಿಸಿ ಫೆಲೋಶಿಪ್‌ಗಳನ್ನು ಸಹ ಮಂಜೂರಿಸಲು ವಿನಂತಿಸಿದರು.<br><br>ಕುಲಪತಿಗಳು ಮಾತನಾಡಿ ಈ ವಿಶ್ವವಿದ್ಯಾಲಯದ ಪ್ರಾರಂಭದ ಹಂತದಲ್ಲಿ, ಈ ಕ್ಯಾಂಪಸ್ಸಿನ ವಿಭಾಗಗಳಲ್ಲಿದ್ದ 86 ಹುದ್ದೆಗಳನ್ನು ಇಲ್ಲಿಯೇ ಉಳಿಸಿಕೊಳ್ಳಲು ಸಾಕಷ್ಟು ಪ್ರಯತ್ನ ಪಟ್ಟರು ಸಾಧ್ಯವಾಗಲಿಲ್ಲವೆಂದು ತಿಳಿಸಿದರು. ರೂಸಾ ಯೋಜನೆ ಅಡಿಯಲ್ಲಿ ರಸಾಯನಶಾಸ್ತ್ರ ವಿಭಾಗಕ್ಕೆ ಧನಸಹಾಯ ಕೋರಿ ಮನವಿ ಸಲ್ಲಿಸಿದ್ದು, ರಸಾಯನಶಾಸ್ತ್ರ ವಿಭಾಗ ಉನ್ನತ ಸಂಶೋಧನಾ ಸಂಸ್ಥೆಯಾಗಿ ರೂಪುಗೊಳ್ಳಬೇಕಾಗಿದೆ ಎಂದು ತಿಳಿಸಿ. ಇದಕ್ಕಾಗಿ ಸದಸ್ಯರ ಅಭಿಪ್ರಾಯದಂತೆ ಒಂದು ಸಮಿತಿ ರಚಿಸುವುದಾಗಿ ತಿಳಿಸಿದರು.<br><br>ಸಿಂಡಿಕೇಟ್ ನಿರ್ಣಯ:<br>1. ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ರಸಾಯನಶಾಸ್ತ್ರ ವಿಭಾಗಕ್ಕೆ ಅಗತ್ಯವಾದ ಪ್ರಾಧ್ಯಾಪಕರ, ಸಹ ಪ್ರಾಧ್ಯಾಪಕರ ಹಾಗೂ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಸೃಜಿಸಲು ಅನುಮತಿ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸಿಂಡಿಕೇಟ್ ಸಭೆ ಸರ್ವಾನುಮತದಿಂದ ತೀರ್ಮಾನಿಸಿತು.<br>2. ರಸಾಯನ ಶಾಸ್ತ್ರ ವಿಭಾಗದ ಉನ್ನತೀಕರಣಕ್ಕಾಗಿ ಹಾಗೂ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಅಗತ್ಯ ಸಂಪನ್ಮೂಲ ಕ್ರೋಢೀಕರಣಕ್ಕಾಗಿ ಡಾ. ಎಂ. ಪಾಂಡುರಂಗಪ್ಪ, ಡೀನರು ವಿಜ್ಞಾನ ನಿಕಾಯ ಇವರ ಅಧ್ಯಕ್ಷತೆಯಲ್ಲಿ, ಸಿಂಡಿಕೇಟ್ ಸದಸ್ಯರಾದ ಶ್ರೀ ಕರಣ್‌ಕುಮಾರ್ ರವರನ್ನು ಮತ್ತು ಅವರು ಸೂಚಿಸುವ ಇನ್ನು ಮೂರು ಜನ ಗಣ್ಯರನ್ನು ಒಳಗೊಂಡ ಸಮಿತಿ ರಚಿಸಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.<br><br>(ಕ್ರಮ: ಕುಲಸಚಿವರು ಹಾಗೂ ಅಧ್ಯಕ್ಷರು, ರಸಾಯನಶಾಸ್ತ್ರ ವಿಭಾಗ) |
| ವಿಷಯ ಸಂಖ್ಯೆ-2 | ವಿಶ್ವವಿದ್ಯಾಲಯದಲ್ಲಿ ಆಯ್ಕೆ ಮಾಡಿರುವ ವಕೀಲರ ತಂಡದ ಪರಿಷ್ಕರಣೆ ಮಾಡುವ ಬಗ್ಗೆ.<br><br>ಗೌರವಾನ್ವಿತ ಸದಸ್ಯರಾದ ಶ್ರೀ ಹೆಚ್. ಎನ್ ಹರಿಪ್ರಸಾದರವರು ಪ್ರಸ್ತಾವನೆಯನ್ನು ಸಭೆಯಲ್ಲಿ ಮಂಡಿಸಿ, ಈಗಿರುವ ನ್ಯಾಯವಾದಿಗಳ ತಂಡದಲ್ಲಿ ಶ್ರೀ ಎಂ. ಎ. ಅರುಣ್ ರವರು ಗೌರವಾನ್ವಿತ ನ್ಯಾಯಾಧೀಶರಾಗಿ ನೇಮಕ ಹೊಂದಿದ್ದು ಶ್ರೀ ನಿತಿನ್ ರಮೇಶ್ ರವರು Additional Advocate General ಆಗಿರುವುದರಿಂದ ನ್ಯಾಯವಾದಿಗಳ ಪಟ್ಟಿಯನ್ನು ಪರಿಷ್ಕರಿಸುವ ಅಗತ್ಯವಿದೆ ಎಂದು ತಿಳಿಸಿದರು. |

| | |
|---|---|
| | ಗೌರವಾನ್ವಿತ ಸದಸ್ಯರಾದ ಶ್ರೀ ಕರಣ್‌ಕುಮಾರ್, ಡಾ. ಇ. ಬಿ ರಾಜೇಶ್, ವೈದ್ಯಕೀಯ ಶಿಕ್ಷಣ ಪರವಾಗಿ ಆಗಮಿಸಿರುವ ಶ್ರೀ ನರಸಿಂಹಪ್ಪ ರವರು ಚರ್ಚೆಯಲ್ಲಿ ಪಾಲ್ಗೊಂಡು ಕೆಳಗಿನ ಅಂಶಗಳನ್ನು ತಿಳಿಸಿದರು.<br><br>a) ವಿಶ್ವವಿದ್ಯಾಲಯದ ನ್ಯಾಯವಾದಿಗಳೊಂದಿಗೆ ತಿಂಗಳಲ್ಲಿ ಒಂದು ದಿವಸ ವಿಶ್ವವಿದ್ಯಾಲಯದ ಅಧಿಕಾರಿಗಳು ಸಮಾಲೋಚಿಸಬೇಕು.<br>b) ವೈಯುಕ್ತಿಕ ನ್ಯಾಯವಾದಿಗಳ ಜೊತೆಗೆ ನ್ಯಾಯವಾದಿಗಳ ಗುಂಪು (Advocates Associates) ಗಳನ್ನು ಪಟ್ಟಿಯಲ್ಲಿ ಸೇರಿಸಲು, ಮಹಿಳಾ ನ್ಯಾಯವಾದಿಗಳನ್ನು ಪಟ್ಟಿಯಲ್ಲಿ ಸೇರಿಸಬೇಕು.<br>c) ನ್ಯಾಯವಾದಿಗಳ ಆಯ್ಕೆಗೆ 5 ರಿಂದ 10 ವರ್ಷಗಳ ಅನುಭವ ನಿಗದಿಪಡಿಸಬೇಕು.<br>d) ಸರ್ವೋನ್ನತ ನ್ಯಾಯಾಲಯ, ಉಚ್ಚ ನ್ಯಾಯಾಲಯ ಹಾಗೂ ಕೆಳಹಂತದ ನ್ಯಾಯಾಲಗಳಿಗೆ ಪ್ರತ್ಯೇಕವಾದ ನ್ಯಾಯವಾದಿಗಳ ಪಟ್ಟಿ ಹೊಂದಬೇಕು.<br>e) ನ್ಯಾಯವಾದಿಗಳಿಗೆ ನೀಡಬೇಕಾದ ವೃತ್ತಿ ಶುಲ್ಕವನ್ನು ನಿಗದಿಪಡಿಸಬೇಕೆಂದು ಸಲಹೆ ನೀಡಿದರು.<br><br>ಕುಲಪತಿಗಳು ಮಾತಾಡಿ ಈಗಿರುವ ಪಟ್ಟಿಯಲ್ಲಿ ಶ್ರೀ. ಎ. ಎಂ. ಅರುಣ್ ರವರು ಗೌರವಾನ್ವಿತ ನ್ಯಾಯಧೀಶರಾಗಿ ನೇಮಕವಾಗಿರುವುದರಿಂದ ಅವರನ್ನು ಪಟ್ಟಿಯಿಂದ ಕೈಬಿಡಬೇಕೆಂದು ಬದಲಿಗೆ ಉಳಿದ ಮೂರು ನ್ಯಾಯವಾದಿಗಳ ಜೊತೆಗೆ ಇನ್ನು 4–5 ನ್ಯಾಯವಾದಿಗಳನ್ನು ಪಟ್ಟಿಯಲ್ಲಿ ಸೇರಿಸಬಹುದು ಹಾಗೂ ನ್ಯಾಯವಾದಿಗಳ ಗುಂಪನ್ನು ಸಹ ಪಟ್ಟಿಯಲ್ಲಿ ಸೇರಿಸಲು ಪರಿಗಣಿಸಬಹುದೆಂದು ತಿಳಿಸಿದರು.<br><br>ಸಿಂಡಿಕೇಟ್ ನಿರ್ಣಯ:<br><br>**ಗೌರವಾನ್ವಿತ ನ್ಯಾಯಧೀಶರಾಗಿ ನೇಮಕ ಹೊಂದಿರುವ ಶ್ರೀ ಎ. ಎಂ. ಅರುಣ್ ರವರನ್ನು ಹೊರತುಪಡಿಸಿ, ಈಗಿರುವ 3 ಜನ ನ್ಯಾಯವಾದಿಗಳ ಜೊತೆಗೆ ಮಹಿಳಾ ನ್ಯಾಯವಾದಿ ಸೇರಿದಂತೆ ಹೆಚ್ಚುವರಿಯಾಗಿ ಸೇರಿಸಬೇಕಾದ ನ್ಯಾಯವಾದಿಗಳ ಹಾಗೂ ನ್ಯಾಯವಾದಿಗಳ ಗುಂಪು (Advocates Associate)ಗಳ ಗರಿಷ್ಠ ಹತ್ತು ನ್ಯಾಯವಾದಿಗಳ ಪಟ್ಟಿಯನ್ನು ಸಿದ್ಧಪಡಿಸಲು ಮತ್ತು ಕರ್ನಾಟಕ ಸರ್ಕಾರದ ಕಾನೂನು ಇಲಾಖೆ ನಿಗದಿಪಡಿಸಿದ ವೃತ್ತಿ ಶುಲ್ಕದ ದರಗಳನ್ನು ಆಧರಿಸಿ, ವಿಶ್ವವಿದ್ಯಾಲಯದ ನ್ಯಾಯವಾದಿಗಳಿಗೆ ನೀಡಬೇಕಾದ ವೃತ್ತಿ ಶುಲ್ಕ ಕುರಿತು ಗೌರವಾನ್ವಿತ ಸದಸ್ಯರಾದ ಶ್ರೀ ಹೆಚ್. ಎನ್. ಹರಿಪ್ರಸಾದ ರವರು ವರದಿ ಸಲ್ಲಿಸಬೇಕೆಂದು ಸಿಂಡಿಕೇಟ್ ಸಭೆ ಸರ್ವಾನುಮತದಿಂದ ತೀರ್ಮಾನಿಸಿತು.**<br><br>(ಕ್ರಮ: ಕುಲಸಚಿವರು ಹಾಗೂ ಕಾನೂನು ಸಲಹೆಗಾರರು) |

| | |
|---|---|
| ವಿಷಯ ಸಂಖ್ಯೆ-3 | ಪರೀಕ್ಷಾ ವಿಭಾಗದಲ್ಲಿ ಸಹಾಯಕ ಕುಲಸಚಿವರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಪುಟ್ಟಸ್ವಾಮಿ, ವಯೋನಿವೃತ್ತ ಅಧಿಕಾರಿ ಅವರ ಸಂಭಾವನೆ ಹೆಚ್ಚಿಸುವ ಬಗ್ಗೆ.<br><br>ಗೌರವಾನ್ವಿತ ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್‌ರವರು, ಈ ರೀತಿಯ ಎಲ್ಲಾ ಪ್ರಕರಣದಲ್ಲಿ ಒಂದು ತಾತ್ವಿಕ ತೀರ್ಮಾನ ತೆಗೆದುಕೊಳ್ಳುವುದು ಉಚಿತವೆಂದು ತಿಳಿಸಿದರು ಇಂತಹ ನಿವೃತ್ತ ಸಿಬ್ಬಂದಿಗಳಿಗೆ consultant ಆಗಿ ಕೆಲಸಕ್ಕೆ ತೆಗೆದುಕೊಂಡು ನೇಮಕಾತಿ ಆದೇಶ ನೀಡದೇ ಇರುವುದು ಸರಿ ಅಲ್ಲವೆಂದು ತಿಳಿಸಿದರು. ಡಾ. ವಿ.ಆರ್. ದೇವರಾಜ್ ರವರು ಬೇರೆ ನಿವೃತ್ತ ಸಿಬ್ಬಂದಿಗಳ ಸಂಭಾವನೆ ಕುರಿತು ಪರಿಶೀಲಿಸಬೇಕೆಂದು ತಿಳಿಸಿದರು ವೈದ್ಯಕೀಯ ಶಿಕ್ಷಣ ನಿರ್ದೇಶಕರ ಪರವಾಗಿ ಆಗಮಿಸಿದ ಜಂಟಿ ನಿರ್ದೇಶಕರು, ಸರ್ಕಾರದಲ್ಲಿ ಸಮಾಲೋಚಕರ ಗರಿಷ್ಠ ಸಂಭಾವನೆ ರೂ. 5.00 ಲಕ್ಷ ಮೀರಿದಂತೆ ಪಾವತಿಸಲು ಅವಕಾಶವಿರುತ್ತದೆ ಹೆಚ್ಚಿನ ಸಂಭಾವನೆ ನೀಡಲು ಹಣಕಾಸು ಇಲಾಖೆಯ ಅನುಮೋದನೆ ಬೇಕಾಗುತ್ತದೆ ಎಂದು ತಿಳಿಸಿದರು.<br><br>ಗೌರವಾನ್ವಿತ ಡಾ. ಆರ್.ಕೆ. ಚಂದ್ರನಾಥ್ ರವರು ನಿವೃತ್ತ ಸಿಬ್ಬಂದಿಗಳನ್ನು ಅರ್ಹತೆ ಹಾಗೂ ಅನುಭವ ಪರಿಗಣಿಸಿ ನೇಮಕ ಮಾಡಿಕೊಳ್ಳಲಾಗುತ್ತದೆ ಎಂದು ತಿಳಿಸಿದರು.<br><br>ಗೌರವಾನ್ವಿತ ಶ್ರೀ ಕರಣ್‌ಕುಮಾರ್ ರವರು ಕೇಂದ್ರ ಸರ್ಕಾರದ MHRD ಯಿಂದ ಮಾರ್ಗದರ್ಶನಗಳಿಗೆ ರೂ. 40,000/- ಕ್ಕಿಂತ ಜಾಸ್ತಿ ಸಂಭಾವನೆ ನೀಡಲು ಅವಕಾಶವಿಲ್ಲ ಇದನ್ನು ಪರಿಶೀಲಿಸಲು ಕೋರಿದರು.<br><br>ಕುಲಸಚಿವರು ವಿವರ ನೀಡಿ, ವಿಶ್ವವಿದ್ಯಾಲಯಕ್ಕೆ 123 ಶಿಕ್ಷಕೇತರ ಹುದ್ದೆಗಳು ಮಂಜೂರಾಗಿದ್ದು, ಅವುಗಳಲ್ಲಿ 47 ಹುದ್ದೆಗಳನ್ನು ಭರ್ತಿಮಾಡಲು ಸರ್ಕಾರ ಅನುಮತಿ ನೀಡಿದೆ. ನಿವೃತ್ತ ಸಿಬ್ಬಂದಿಗಳಿಗೆ ಸಮಾಲೋಚಕರಾಗಿ ತೆಗೆದುಕೊಳ್ಳುತ್ತಾರೆ. ಪುನರ್ ನೇಮಕಾತಿ ಪ್ರಕ್ರಿಯೆ ತುಂಬಾ ಜಟಿಲವಾಗಿದ್ದು, ಅದಕ್ಕೆ ಸಚಿವ ಸಂಪುಟದ ಅನುಮೋದನೆ ಬೇಕಾಗುತ್ತದೆ. ಸಾಮಾನ್ಯವಾಗಿ ಪುನರ್ ನೇಮಕಕ್ಕೆ ಸರ್ಕಾರ ಅನುಮತಿ ನೀಡುವದಿಲ್ಲವೆಂದು ತಿಳಿಸಿದರು. ಪುನರ್ ನೇಮಕಾತಿ ವೇತನವನ್ನು ಅಂತಿಮ ವೇತನದ ಆಧಾರದ ಮೇಲೆ ಕೆಸಿಎಸ್‌ಆರ್ ಪ್ರಕಾರ ಅಂತಿಮ ವೇತನದಲ್ಲಿ ನಿವೃತ್ತಿ ವೇತನವನ್ನು ಕಳೆದು ನಿಗದಿಪಡಿಸಬೇಕಾಗುತ್ತದೆ.<br><br>ಸಿಂಡಿಕೇಟ್ ನಿರ್ಣಯ:<br><br>ಶ್ರೀ. ಪುಟ್ಟಸ್ವಾಮಿ ನಿವೃತ್ತ ಸಹಾಯಕ ಕುಲಸಚಿವರು ಪರೀಕ್ಷಾ ವಿಭಾಗ ಇವರಿಗೆ ಸಮಾಲೋಚಕರಾಗಿ ನೀಡುತ್ತಿರುವ ಸಂಭಾವನೆಯನ್ನು ರೂ 30,000/- ದಿಂದ ರೂ 40,000/- ಗಳಿಗೆ ಹೆಚ್ಚಿಸಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.<br><br>(ಕ್ರಮ: ಕುಲಸಚಿವರು) |

| | |
|---|---|
| ವಿಷಯ ಸಂಖ್ಯೆ–4 | ಕೆನರಾ ಬ್ಯಾಂಕ್ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ಹಾಗೂ ಜಾಗತಿಕ ಭಾಷೆಗಳ ಕೇಂದ್ರದ ಸಂಯೋಜಕರನ್ನು ವಿಭಾಗದ ಮುಖ್ಯಸ್ಥರನ್ನಾಗಿ ನೇಮಕ ಮಾಡುವ ಬಗ್ಗೆ.<br><br>ಸಿಂಡಿಕೇಟ್ ನಿರ್ಣಯ:<br>1. ಡಾ. ಎಂ. ನಿರ್ಮಲಾ ಸಹ ಪ್ರಾಧ್ಯಾಪಕರನ್ನು **CBSMS** ನ ಮುಖ್ಯಸ್ಥರಾಗಿ ಹಾಗೂ ಡಾ. ಜ್ಯೋತಿ ವೆಂಕಟೇಶ್ ಸಹ ಪ್ರಾಧ್ಯಾಪಕರನ್ನು ಜಾಗತಿಕ ಭಾಷೆಗಳ ಕೇಂದ್ರದ ಮುಖ್ಯಸ್ಥರಾಗಿ ನೇಮಕ ಮಾಡಲು ಸಿಂಡಿಕೇಟ್ ಸಭೆ ಸರ್ವಾನುಮತದ ಅನುಮೋದನೆ ನೀಡಿತು.<br>2. ಇನ್ನು ಮುಂದೆ ಇಂತಹ ವಿಷಯಗಳ ಕುರಿತು ಕುಲಪತಿಗಳು ಕ್ರಮ ಕೈಕೊಂಡು ಸಿಂಡಿಕೇಟ್‌ಗೆ ವರದಿ ಮಾಡಬೇಕೆಂದು ತೀರ್ಮಾನಿಸಲಾಯಿತು.<br>(ಕ್ರಮ: ಕುಲಸಚಿವರು) |
| ವಿಷಯ ಸಂಖ್ಯೆ–5 | NET / SLET/ Ph.D ಇಲ್ಲದ ನಿವೃತ್ತ ಅತಿಥಿ ಉಪನ್ಯಾಸಕರಿಗೆ ಸಂಭಾವನೆ ನೀಡುವ ಬಗ್ಗೆ.<br><br>ಪ್ರಸ್ತಾವನೆಯಲ್ಲಿ ತಿಳಿಸಿದ 5 ಜನ ನಿವೃತ್ತ ಪ್ರಾಧ್ಯಾಪಕರು ಪಿ.ಹೆಚ್.ಡಿ ಪದವಿ ಹೊಂದಿರುವುದಿಲ್ಲವಾದ್ದರಿಂದ ಅವರಿಗೆ ಯು.ಜಿ.ಸಿ. ನಿಯಮಗಳ ಪ್ರಕಾರ ರೂ. 750/– ಸಂಭಾವನೆ ನೀಡಲಾಗಿದೆ. ಅವರ ಅನುಭವ ಹಾಗೂ ಪ್ರತಿಭೆ ಗಮನಿಸಿ ಪಿ.ಹೆಚ್.ಡಿ ಪದವಿ ಹೊಂದಿದ ಅತಿಥಿ ಉಪನ್ಯಾಸಕರಿಗೆ ಸಮಾನವಾದ ರೂ. 1250/– ಮಂಜೂರಿಸಲು ಪ್ರಸ್ತಾಪಿಸಲಾಗಿದೆ ಎಂದು ಸಭೆಗೆ ತಿಳಿಸಲಾಯಿತು.<br>ಗೌರವಾನ್ವಿತ ಸದಸ್ಯರಾದ ಡಾ. ಹೆಚ್.ಟಿ. ಅರವಿಂದ ರವರು ಯು.ಜಿ.ಸಿ ನಿಗದಿ ಪಡಿಸಿದ ಸಂಭಾವನೆಯನ್ನು ನಿಯಮಾವಳಿಗಳ ಪ್ರಕಾರ ಅತಿಥಿ ಉಪನ್ಯಾಸಕರಿಗೆ ನೀಡ ಬೇಕಾಗುತ್ತದೆ ಎಂದು ತಿಳಿಸಿದರು.<br>ಗೌರವಾನ್ವಿತ ಸದಸ್ಯರಾದ ಶ್ರೀ ಕರಣ್‌ಕುಮಾರ್ ಮಾತನಾಡಿ ನಿಯಾಮಾವಳಿಗಳನ್ನು ಪಾಲಿಸಬೇಕೆಂದು ತಿಳಿಸಿದರು ಚರ್ಚೆಯಲ್ಲಿ ಶ್ರೀಮತಿ ಜ್ಯೋತಿ ವಿಜಯ್, ಶ್ರೀ ಎಚ್.ಎನ್ ಹರಿಪ್ರಸಾದ್, ಡಾ. ಎಂ. ಪಾಂಡುರಂಗಪ್ಪ ಭಾಗವಹಿಸಿದರು<br>ಸಿಂಡಿಕೇಟ್ ನಿರ್ಣಯ:<br>**UGC** ನಿಯಮಾವಳಿಗಳ ಪ್ರಕಾರ ಪಿ.ಹೆಚ್.ಡಿ ಪದವಿ ಹೊಂದಿರುವ ಅತಿಥಿ ಉಪನ್ಯಾಸಕರಿಗೆ ಪ್ರತಿ ಗಂಟೆಗೆ ರೂ. 1250/– ಹಾಗೂ ಪಿ.ಹೆಚ್.ಡಿ ಪದವಿ ಇಲ್ಲದ ಅತಿಥಿ ಉಪನ್ಯಾಸಕರಿಗೆ ರೂ. 750/– ಮಂಜೂರಿಸಲು ಕ್ರಮ ಕೈಕೊಳ್ಳಬೇಕೆಂದು ತೀರ್ಮಾನಿಸಲಾಯಿತು<br>(ಕ್ರಮ: ಕುಲಸಚಿವರು) |
| ವಿಷಯ ಸಂಖ್ಯೆ–6 | 2020–21 ನೇ ಸಾಲಿನ ಸಂಯೋಜನಾ ಶುಲ್ಕವನ್ನು ನಿಗದಿ ಪಡಿಸುವ ಬಗ್ಗೆ.<br><br>ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿ ಪ್ರಸ್ತುತ ಕೋವಿಡ್–19 ಹಿನ್ನೆಲೆಯಲ್ಲಿ ಮಹಾವಿದ್ಯಾಲಯಗಳ ಆರ್ಥಿಕ ಪರಿಸ್ಥಿತಿಯನ್ನು ಗಮನಿಸಿ ಈಗಿರುವ ಸಂಯೋಜನಾ ಶುಲ್ಕದ ದರವನ್ನು 10% ಕಡಿಮೆ ಮಾಡಬೇಕೆಂದು ಸಲಹೆ ನೀಡಿದರು. |

| | |
|---|---|
| | ಗೌರವಾನ್ವಿತ ಸದಸ್ಯರಾದ ಶ್ರೀ ಕರಣ್‌ಕುಮಾರ್ ರವರು ಮಾತನಾಡಿ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ಶಿಕ್ಷಣ ಹಾಗೂ ಸಂಶೋಧನೆಗೆ ಅಗತ್ಯವಾದ ಮೂಲಸೌಲಭ್ಯ ಹಾಗೂ ಸಂಪನ್ಮೂಲಗಳ ಕ್ರೋಡೀಕರಣಕ್ಕೆ ಒಂದು ಸಮಿತಿ ರಚಿಸಿ ಕಾರ್ಪೋರೇಟ್ ಸಂಸ್ಥೆಗಳನ್ನು ಸಂಪರ್ಕಿಸಿ ಸಹಾಯ ಪಡೆದು ಮೂಲಸೌಲಭ್ಯ ಒದಗಿಸಲು ಪ್ರಯತ್ನಿಸ ಬಹುದೆಂದು ತಿಳಿಸಿದರು.<br><br>ಗೌರವಾನ್ವಿತ ಸದಸ್ಯರಾದ ಡಾ. ಆರ್. ಪಾರ್ವತಿಯವರು, ಶಾಶ್ವತ ಸಂಯೋಜನೆ ಹೊಂದಿರುವ ಮಹಾವಿದ್ಯಾಲಯಗಳಿಂದ, ಸಂಯೋಜಿತ ಮಹಾವಿದ್ಯಾಲಯಗಳಿಗೆ ಅನ್ವಯಿಸುವ ಶುಲ್ಕ ಆಕರಿಸಲಾಗುತ್ತಿದೆ ಇದನ್ನು ಸರಿಪಡಿಸಬೇಕೆಂದು ತಿಳಿಸಿದರು.<br><br>ಮಹಾವಿದ್ಯಾಲಯಗಳ ಸಂಯೋಜನೆಯ ಆನ್‌ಲೈನ್ ಪ್ರಕ್ರಿಯೆ ಕುರಿತಂತೆ ಸರ್ಕಾರ ಮಾರ್ಗದರ್ಶನಗಳನ್ನು ಬಿಡುಗಡೆ ಮಾಡಿರುವುದು ಆದಷ್ಟು ಬೇಗ ಅಂತಿಮ ತೀರ್ಮಾನ ಹೊರಬರುವ ಸಾಧ್ಯತೆ ಇದೆ ಎಂದು ಕುಲಸಚಿವರು ತಿಳಿಸಿದರು. ಗೌರವಾನ್ವಿತ ಸದಸ್ಯರಾದ ಶ್ರೀ ಕರಣ್‌ಕುಮಾರ್ ರವರು ಸ್ಥಳೀಯ ವಿಚಾರಣಾ ಸಮಿತಿ ನೀಡುವ ಭೇಟಿ ಜಿಯೋ ಸ್ಟ್ಯಾಂಪಿಂಗ್ ಆಗಬೇಕು ಹಾಗೂ ವರದಿಗಳನ್ನು ಪ್ರತಿ ವರ್ಷ ವಿಮರ್ಶೆಗೆ ಒಳಪಡಿಸಬೇಕೆಂದು ಹೇಳಿದರು.<br><br>**ಸಿಂಡಿಕೇಟ್ ನಿರ್ಣಯ:**<br>**ಪ್ರಸ್ತುತ ಕೋವಿಡ್-19 ಸೋಂಕಿನಿಂದಾಗಿ ಆರ್ಥಿಕ ಹಿಂಜರಿತ ಉಂಟಾಗಿರುವುದರಿಂದ ಸಂಯೋಜನಾ ಶುಲ್ಕಗಳನ್ನು ಈಗಿರುವ ದರಕ್ಕಿಂತ ಪ್ರತಿಶತ 10 ರಷ್ಟು ಕಡಿಮೆ ಮಾಡಲು ಸಿಂಡಿಕೇಟ್ ಸಭೆ ಸರ್ವಾನುಮತದಿಂದ ತೀರ್ಮಾನಿಸಿತು. ಈ ಕುರಿತು ಕುಲಪತಿಗಳು ಪತ್ರಿಕಾ ಪ್ರಕಟಣೆ ನೀಡಲು ಅನುಮೋದನೆ ನೀಡಲಾಯಿತು.**<br><br>(ಕ್ರಮ: ಕುಲಸಚಿವರು) |
| ವಿಷಯ ಸಂಖ್ಯೆ-7 | ಅತಿಥಿ ಉಪನ್ಯಾಸಕರಿಗೆ ರಜಾ ಅವಧಿಯಲ್ಲಿ ಸಂಭಾವನೆ ಪಾವತಿ ಮಾಡುವ ಬಗ್ಗೆ. |
| | ಗೌರವಾನ್ವಿತ ಸದಸ್ಯರಾದ ಶ್ರೀ ಹರಿಪ್ರಸಾದ್, ಡಾ. ಆರ್. ಕೆ ಚಂದ್ರನಾಥ್, ಶ್ರೀ ಟಿ.ಹೆಚ್. ಶ್ರೀನಿವಾಸಮೂರ್ತಿ, ಡಾ ವಿ. ಆರ್. ದೇವರಾಜ್, ಶ್ರೀ ಕರಣ್ ಕುಮಾರ್, ಶ್ರೀಮತಿ ಜ್ಯೋತಿ ವಿಜಯ್, ಡಾ ಹೆಚ್.ಟಿ. ಅರವಿಂದ್, ಡಾ. ಎಂ. ಪಾಂಡುರಂಗಪ್ಪ, ವೈದ್ಯಕೀಯ ನಿರ್ದೇಶಕರ ಪ್ರತಿನಿಧಿ, ತಾಂತ್ರಿಕ ಶಿಕ್ಷಣ ನಿರ್ದೇಶಕರ ಪ್ರತಿನಿಧಿ ಭಾಗವಹಿಸಿ, ಅತಿಥಿ ಉಪನ್ಯಾಸಕರು, ರಜಾ ಅವಧಿಯಲ್ಲಿ ಕೆಲಸ ನಿರ್ವಹಿಸಿರುವ ಕುರಿತು ಸಹಾನುಭೂತಿ ಇದ್ದರೂ ನಿಯಮಾವಳಿಗಳಲ್ಲಿ ಅವಕಾಶ ಇಲ್ಲದಿರುವ ಕಾರಣ ಪರಿಗಣಿಸಲು ಆಗುವುದಿಲ್ಲವೆಂದು ತಿಳಿಸಿದರು.<br><br>ಅತಿಥಿ ಉಪನ್ಯಾಸಕರ ನೇಮಕಾತಿ ವಿಧಿವಿಧಾನಗಳ ಕುರಿತು ಚರ್ಚಿಸುವ ಸಂದರ್ಭದಲ್ಲಿ ಗೌರವಾನ್ವಿತ ಸದಸ್ಯರಾದ ಶ್ರೀ ಕರಣ್ ಕುಮಾರ್ ರವರು ಅಗತ್ಯ ನಿಯಮಾವಳಿಗನ್ನು ರಚಿಸಿ ಜಾರಿಯಲ್ಲಿ ತರಬೇಕು ಈ ವಿಶ್ವವಿದ್ಯಾಲಯದ ಪರಿನಿಯಮಗಳನ್ನು ರಚಿಸುವವರೆಗೆ ಬೆಂಗಳೂರು ವಿಶ್ವವಿದ್ಯಾಲಯ ನಿಯಮಗಳು ಅನ್ವಯವಾಗುತ್ತವೆ ಅದರಂತೆ ಕ್ರಮವಹಿಸಬೇಕೆಂದು ಹೇಳಿದರು. ಸಿಬ್ಬಂದಿಗಳಿಗೆ ನೇಮಕಾತಿ ಆದೇಶ ನೀಡದಿರುವದನ್ನು ಗಮನಿಸಿ, ವಿಶ್ವವಿದ್ಯಾಲಯದಲ್ಲಿ ಕೆಲಸ ನಿರ್ವಹಿಸುತ್ತಿರುವ ಎಲ್ಲಾ ಅತಿಥಿ ಉಪನ್ಯಾಸಕರು, ಗುತ್ತಿಗೆ ಆಧಾರದ ಮತ್ತು ನಿವೃತ್ತ ಸಿಬ್ಬಂದಿಗಳ ವಿವರಗಳನ್ನು ಮುಂದಿನ ಸಭೆಯಲ್ಲಿ ಒದಗಿಸಬೇಕೆಂದು ಗೊತ್ತುವಳಿ ಮಂಡಿಸುವುದಾಗಿ ತಿಳಿಸಿದರು. |

| | |
|---|---|
| | ಕುಲಸಚಿವರು ವಿವರಣೆ ನೀಡಿ ಸರ್ಕಾರ ನವೆಂಬರ್ 2019ರಲ್ಲಿ ಆದೇಶ ಹೊರಡಿಸಿ, ವಿವಿಧ ಹುದ್ದೆಗಳ ಸೃಜನೆ ಆಗಿದೆ. ವಿಶ್ವವಿದ್ಯಾಲಯ ಸೇವೆ ಪಡೆಯುವ ಯಾವುದೇ ವ್ಯಕ್ತಿಗೆ ಕೆಲಸ ವಹಿಸಿ ಆದೇಶ ನೀಡಬೇಕಾಗುತ್ತದೆ ಎಂದು ತಿಳಿಸಿ ವಿಶ್ವವಿದ್ಯಾಲಯದಲ್ಲಿ ಕೆಲಸ ನಿರ್ವಹಿಸುತ್ತಿರುವ ಎಲ್ಲಾ ರೀತಿಯ ಮಾನವ ಸಂಪನ್ಮೂಲ ವ್ಯಕ್ತಿಗಳ ವಿವರಗಳನ್ನು ಸಿಂಡಿಕೇಟ್ ಸಭೆಗೆ ಒದಗಿಸಲಾಗುವುದೆಂದು ಹೇಳಿದರು.<br><br>**ಸಿಂಡಿಕೇಟ್ ನಿರ್ಣಯ:**<br><br>ನಿಯಮಾವಳಿಗಳಲ್ಲಿ ಶೈಕ್ಷಣಿಕ ವರ್ಷದಲ್ಲಿ 10 ತಿಂಗಳುಗಳಿಗೆ ಮಾತ್ರ ಸಂಭಾವನೆ ನೀಡಲು ಅವಕಾಶವಿರುವುದರಿಂದ ಪ್ರಾಸ್ತವನೆ, ಪರಿಗಣಿಸಲು ಸಾಧ್ಯವಿಲ್ಲವೆಂದು ಸಿಂಡಿಕೇಟ್ ಸಭೆ ತೀರ್ಮಾನಿಸಲಾಯಿತು.<br><br>(ಕ್ರಮ: ಕುಲಸಚಿವರು) |
| ವಿಷಯ ಸಂಖ್ಯೆ-8 | ವಾಣಿಜ್ಯ ವಿಭಾಗದಲ್ಲಿ International Marketing ವಿಷಯದ ಬೋಧನೆ ಮಾಡಿರುವ ಶ್ರೀ ಸಂಪತ್ ಕುಮಾರ್, ಅತಿಥಿ ಉಪನ್ಯಾಸಕರಿಗೆ ಸಂಭಾವನೆ ಪಾವತಿ ಮಾಡುವ ಬಗ್ಗೆ.<br><br>**ಸಿಂಡಿಕೇಟ್ ನಿರ್ಣಯ:**<br><br>ವಾಣಿಜ್ಯ ವಿಭಾಗದಲ್ಲಿ ಅತಿಥಿ ಉಪನ್ಯಾಸಕರಾಗಿ ಬೋಧನೆ ಮಾಡಿರುವ ಶ್ರೀ ಸಂಪತ್ ಕುಮಾರ್ ರವರ ವಯಸ್ಸು 70 ವರ್ಷ ದಾಟಿರುವುದರಿಂದ ಈ ಪ್ರಾಸ್ತವನೆ ಒಪ್ಪಿಕೊಳ್ಳಲು ಸಾಧ್ಯವಿಲ್ಲವೆಂದು ಸಿಂಡಿಕೇಟ್‌ಸಭೆ ತೀರ್ಮಾನಿಸಿತು.<br><br>(ಕ್ರಮ: ಕುಲಸಚಿವರು) |
| ವಿಷಯ ಸಂಖ್ಯೆ-9 | ಕೋವಿಡ್ – 19 ಕೋರೊನಾ ರೋಗಾಣು ನಿಯಂತ್ರಣ ಹಾಗೂ ಮುನ್ನೆಚ್ಚರಿಕೆ ಕ್ರಮವಾಗಿ ಸರ್ಕಾರ ರಜೆ ಘೋಷಿಸಿರುವ ಅವಧಿಯಲ್ಲಿ ಜರುಗಿದ ವಿವಿಧ ಚಟುವಟಿಕೆಗಳ ಕುರಿತು ಕುಲಪತಿಗಳಿಂದ ವರದಿ.<br><br>ಕೋವಿಡ್-19 ಸಂದರ್ಭದಲ್ಲಿ ರಜಾ ಅವಧಿಯಲ್ಲಿ ಜರುಗಿದ ವಿವಿಧ ಚಟುವಟಿಕೆಗಳ ಕುರಿತು ಕುಲಪತಿಗಳು ವಿವರಿಸಿದರು. MHRD, UGC, ಹಾಗೂ ರಾಜ್ಯ ಸರ್ಕಾರದ ಸೂಚನೆಯಂತೆ ಪರೀಕ್ಷೆ ಪ್ರಾರಂಭವಾಗುವ ಮುಂಚೆ 25 ದಿವಸಗಳ ಪಾಠ ಪ್ರವಚನ ಜರುಗಬೇಕಾಗಿದೆ ಎಂದು ತಿಳಿಸಿದರು. ಮುಂದಿನ ಶೈಕ್ಷಣಿಕ ವರ್ಷಗಳಲ್ಲಿ ಕನಿಷ್ಠ 25% ಪಠ್ಯಕ್ರಮ ಆನ್‌ಲೈನ್ ಮುಖಾಂತರ ನಿರ್ವಹಿಸಬೇಕಾಗಬಹುದು ಇದಕ್ಕಾಗಿ ಅಗತ್ಯ ವ್ಯವಸ್ಥೆ ಮಾಡಿಕೊಳ್ಳಬೇಕಾಗಿದೆ ಎಂದು ತಿಳಿಸಿದರು<br><br>**ಸಿಂಡಿಕೇಟ್ ನಿರ್ಣಯ:**<br><br>ಕೋವಿಡ್-19 ಸಂದರ್ಭದಲ್ಲಿ ರಜಾ ಅವಧಿಯಲ್ಲಿ ಜರುಗಿದ ವಿವಿಧ ಚಟುವಟಿಕೆಗಳ ವರದಿಯನ್ನು ಸಿಂಡಿಕೇಟ್ ಸಭೆ ಅನುಮೋದಿಸಿತು. |

| | |
|---|---|
| ವಿಷಯ ಸಂಖ್ಯೆ-10 | 2020-21 ಸಾಲಿನ ಆಯವ್ಯಯ ಅಂದಾಜುಗಳನ್ನು ಪರಿಶೀಲಿಸಿ ಅನುಮೋದನೆ ನೀಡುವ ಕುರಿತು.<br>ಕುಲಸಚಿವರು 2020-21 ಆಯವ್ಯಯದ ವಿವಿಧ ಲೆಕ್ಕ ಶೀರ್ಷಿಕೆಗಳಲ್ಲಿ ಕಲ್ಪಿಸಲಾದ ಅಂದಾಜುಗಳ ವಿವಿರ ನೀಡಿದರು.<br>ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿ 2020-21ನೇ ಸಾಲಿನ ಆಯವ್ಯಯದಲ್ಲಿ ಕಳೆದ ವರ್ಷದ ವಾಸ್ತವಿಕ ವೆಚ್ಚದ ವಿವರಗಳು ಇಲ್ಲದಿರುವ ಕುರಿತು ಆಕ್ಷೇಪ ವ್ಯಕ್ತಪಡಿಸಿ, ಈ ಮಾಹಿತಿ ಇಲ್ಲದೆ ಆಯವ್ಯಯವನ್ನು ಪರಿಗಣಿಸಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿದರು.<br>ಗೌರವಾನ್ವಿತ ಸದಸ್ಯರಾದ ಶ್ರೀ ಕರಣ್‌ಕುಮಾರ ರವರು ಲೆಕ್ಕ ಪರಿಶೀಲನೆ ಆಗಿರುವ ಕುರಿತು ಕೇಳಿದ ಮಾಹಿತಿಗೆ, ವಿತ್ತಾಧಿಕಾರಿಗಳ 2017-18, 2018-19, 2019-20 ಆರ್ಥಿಕ ವರ್ಷದ ಲೆಕ್ಕ ತನಿಖೆ, ರಾಜ್ಯ ಲೆಕ್ಕಪತ್ರ ಇಲಾಖೆಯಿಂದ ತನಿಖೆ ಆಗಿದೆ, ವರದಿ ಇನ್ನೂ ಬಿಡುಗಡೆ ಆಗಿಲ್ಲವೆಂದು ತಿಳಿಸಿದರು.<br>**ಸಿಂಡಿಕೇಟ್ ನಿರ್ಣಯ:**<br>**2019-20 ನೇ ಸಾಲಿನ ವಾರ್ಷಿಕ ವೆಚ್ಚಗಳ ಕುರಿತು ವಿವರಗಳನ್ನು ಆಯವ್ಯಯದಲ್ಲಿ ನಮೂದಿಸಿ ಸಲ್ಲಿಸಲು ಸೂಚಿಸಿ 2020-21ನೇ ಸಾಲಿನ ಆಯವ್ಯಯ ಅಂದಾಜುಗಳ ಪರಿಶೀಲನೆಯನ್ನು ಮುಂದೂಡಲಾಯಿತು.**<br>(ಕ್ರಮ: ವಿತ್ತಾಧಿಕಾರಿಗಳು) |
| ವಿಷಯ ಸಂಖ್ಯೆ-11 | Campus Redevelopment<br>**ಸಿಂಡಿಕೇಟ್ ನಿರ್ಣಯ:**<br>**2020-21ನೇ ಸಾಲಿನ ಆಯವ್ಯಯ ಅಂದಾಜುಗಳ ಪರಿಶೀಲನೆಯನ್ನು ಮುಂದೂಡಿರುವುದರಿಂದ ಈ ವಿಷಯವನ್ನೂ ಮುಂದೂಡಲಾಯಿತು.**<br>(ಕ್ರಮ: ಕುಲಸಚಿವರು) |
| ವಿಷಯ ಸಂಖ್ಯೆ-12 | ವಿಶ್ವವಿದ್ಯಾಲಯದ ಬೋಧಕ - ಬೋಧಕೇತರ ಸಿಬ್ಬಂದಿಯ ನೇಮಕಾತಿಗೆ ಸಂಬಂಧಿಸಿದ ಹಾಗೂ ಹೊಸ ಅಧ್ಯಯನ ವಿಭಾಗಗಳನ್ನು ಸ್ಥಾಪಿಸುವ ಕುರಿತು ಕರಡು ಪರಿನಿಯಗಳನ್ನು ಪರಿಗಣಿಸುವ ಕುರಿತು.<br>**ಸಿಂಡಿಕೇಟ್ ನಿರ್ಣಯ:**<br>**ಪರಿನಿಯಮಗಳ ರಚನಾ ಸಮಿತಿಯ ಪರಿಶೀಲನೆಗೆ ಕಳುಹಿಸಲು ತೀರ್ಮಾನಿಸಲಾಯಿತು.**<br>(ಕ್ರಮ: ಕುಲಸಚಿವರು) |

ಸಮಯದ ಅಭಾವದಿಂದ ಉಳಿದ ವಿಷಯಗಳ ಪರಿಶೀಲನೆಯನ್ನು ದಿನಾಂಕ 16.06.2020 ಕ್ಕೆ ಮುಂದೂಡಲು ತೀರ್ಮಾನಿಸಲಾಯಿತು.

ದಿನಾಂಕ 16.06.2020 ರಂದು ಪೂರ್ವಾಹ್ನ 11.00 ಗಂಟೆಗೆ ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು 560 001 ಇಲ್ಲಿ ಜರುಗಿದ ಮುಂದುವರೆದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡಾವಳಿಗಳು.

ಹಾಜರಾದ ಸದಸ್ಯರು:

| | | |
|---|---|---|
| 1. | ಪ್ರೊ. ಎಸ್. ಜಾಫೆಟ್, ಕುಲಪತಿಗಳು | ಸಭಾಧ್ಯಕ್ಷರು |
| 2. | ಡಾ: ರಮೇಶ್ ಬಾಬು, ಜಂಟಿ ನಿರ್ದೇಶಕರು<br>ಕಾಲೇಜು ಶಿಕ್ಷಣ ಇಲಾಖೆ ಆಯುಕ್ತರ ಪರವಾಗಿ | ಸದಸ್ಯರು |
| 3. | ಡಾ: ಹೆಚ್.ಟಿ. ಅರವಿಂದ್ | ಸದಸ್ಯರು |
| 4. | ಶ್ರೀ ಹೆಚ್.ಆರ್. ಸತೀಶ್ | ಸದಸ್ಯರು |
| 5. | ಶ್ರೀ ಕರಣ್‌ಕುಮಾರ್ | ಸದಸ್ಯರು |
| 6. | ಶ್ರೀ ಹೆಚ್.ಎನ್. ಹರಿಪ್ರಸಾದ | ಸದಸ್ಯರು |
| 7. | ಶ್ರೀಮತಿ ಜ್ಯೋತಿ ವಿಜಯ್ | ಸದಸ್ಯರು |
| 8. | ಶ್ರೀ ಟಿ.ಹೆಚ್. ಶ್ರೀನಿವಾಸಯ್ಯ | ಸದಸ್ಯರು |
| 9. | ಡಾ. ಆರ್.ಕೆ. ಚಂದ್ರನಾಥ್ | ಸದಸ್ಯರು |
| 10. | ಶ್ರೀ ಥಾಮಸ್ ನೀಲಿಯಾರ | ಸದಸ್ಯರು |
| 11. | ಡಾ. ಬಿ.ಎ. ಅನುರಾಧಾ | ಸದಸ್ಯರು |
| 12. | ಡಾ. ಆರ್. ಪಾರ್ವತಿ | ಸದಸ್ಯರು |
| 13. | ಡಾ. ಇ.ಬಿ.ರಾಜೇಶ್ | ಸದಸ್ಯರು |
| 14. | ಶ್ರೀ ಡಿ.ಜಿ. ಶ್ರೀನಿವಾಸಮೂರ್ತಿ | ಸದಸ್ಯರು |
| 15. | ಡಾ: ಎಂ. ಪಾಂಡುರಂಗಪ್ಪ | ಸದಸ್ಯರು |
| 16. | ಡಾ. ವಿ.ಆರ್. ದೇವರಾಜು | ಸದಸ್ಯರು |
| 17. | ಪ್ರೊ. ಬಿ. ರಮೇಶ್, ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 18. | ಶ್ರೀ ಪಿ. ಕುಮಾರ್, ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |

ಕುಲಸಚಿವರು ಮುಂದೂಡಲಾದ ಸಿಂಡಿಕೇಟ್ ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಸದಸ್ಯರನ್ನು ಸ್ವಾಗತಿಸಿ ಕಾರ್ಯಸೂಚಿಯನ್ನು ಚರ್ಚೆಗೆ ತೆಗೆದುಕೊಂಡರು

| | |
|---|---|
| ವಿಷಯ ಸಂಖ್ಯೆ-10 | 2020-21 ಸಾಲಿನ ಆಯವ್ಯಯ ಅಂದಾಜುಗಳನ್ನು ಪರಿಶೀಲಿಸಿ ಅನುಮೋದನೆ ನೀಡುವ ಕುರಿತು<br><br>ದಿನಾಂಕ 05.06.2020ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಸೂಚಿಸಿದಂತೆ, 2019-20ನೇ ಸಾಲಿನ ವಾರ್ಷಿಕ ವೆಚ್ಚದ ವಿವರಗಳನ್ನು ಆಯವ್ಯಯದಲ್ಲಿ ಅಳವಡಿಸಿದ ಪ್ರತಿಗಳನ್ನು ಸಭೆಯಲ್ಲಿ ಮಂಡಿಸಲಾಯಿತು.<br><br>ಗೌರವಾನ್ವಿತ ಸದಸ್ಯರಾದ ಶ್ರೀ ಕರಣ್ ಕುಮಾರ್, ಡಾ. ಆರ್. ಪಾರ್ವತಿ, ಶ್ರೀಮತಿ ಜ್ಯೋತಿ ವಿಜಯ್, ಡಾ. ಹೆಚ್.ಟಿ.ಅರವಿಂದ್, ಡಾ. ಆರ್.ಕೆ. ಚಂದ್ರನಾಥ, ಡಾ. ಬಿ.ಎ. ಅನುರಾಧ, ಡಾ. ಇ.ಬಿ. ರಾಜೇಶ್. ಪ್ರೊ. ಡಿ.ಜಿ. ಶ್ರೀನಿವಾಸಮೂರ್ತಿ, ಶ್ರೀ ಟಿ. ಹೆಚ್. ಶ್ರೀನಿವಾಸಯ್ಯ, ಡಾ. ವಿ.ಆರ್. ದೇವರಾಜ್, ಡಾ. ಎಂ. ಪಾಂಡುರಂಗಪ್ಪ, ಶ್ರೀ. ಹೆಚ್.ಎನ್. ಹರಿಪ್ರಸಾದ, ಶ್ರೀ ಹೆಚ್ ಆರ್. ಸತೀಶ್ ಮುಂತಾದವರು ಚರ್ಚೆಯಲ್ಲಿ ಪಾಲ್ಗೊಂಡು ಕೆಳಗಿನ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.<br><br>a) 2020-21 ನೇ ಸಾಲಿನ ಆಯವ್ಯಯ ಹಣಕಾಸು ಸಮಿತಿ ಸಭೆಯಲ್ಲಿ ಅನುಮೋದನೆಯಾಗಿರುವ ಕುರಿತು ಕೇಳಿದ ಮಾಹಿತಿಗೆ, ವಿತ್ತಾಧಿಕಾರಿಗಳು ದಿನಾಂಕ 28.05.2020 ರಂದು ಜರುಗಿದ ಹಣಕಾಸು ಸಮಿತಿಯ ಶಿಫಾರಸ್ಸುಗಳನ್ನು ಸಭೆಗೆ ವಿವರಿಸಿದರು ಹಾಗೂ ಸದರಿ ಸಮಿತಿಯ ಶಿಫಾರಸ್ಸಿನಂತೆ ಅಗತ್ಯ ತಿದ್ದುಪಡಿಗಳನ್ನು ಆಯವ್ಯಯದಲ್ಲಿ ಮಾಡಲಾಗಿದೆ ಎಂದು ತಿಳಿಸಿದರು.<br><br>b) ಎನ್ಎಸ್ಎಸ್ ಚಟುವಟಿಕೆಗಳ ಕುರಿತು ಮಹಾವಿದ್ಯಾಲಯಗಳಿಗೆ ಮರುಪಾವತಿಸಬೇಕಾದ ಹಣ ಬದಿರುವುದಿಲ್ಲವೆಂದು ತಿಳಿಸಿದರು.<br><br>c) ಆಯವ್ಯಯ ಸಿದ್ಧಪಡಿಸುವಾಗ ಪ್ರತಿ ಶೀರ್ಷಿಕೆಯಲ್ಲಿ ಒದಗಿಸಲಾದ ಮೊತ್ತವನ್ನು ಕಳೆದ ವರ್ಷಕ್ಕೆ ಹೋಲಿಕೆ ಮಾಡಿ ಹೆಚ್ಚು ಅಥವಾ ಕಡಿಮೆವಾಗಿರುವ ಶೇಕಡಾವಾರು ಪ್ರಮಾಣವನ್ನು ನಮೂದಿಸಬೇಕು, ವಿದ್ಯಾರ್ಥಿ ಕಲ್ಯಾಣ ಕಾರ್ಯಕ್ರಮಗಳು ವಿಶ್ವವಿದ್ಯಾಲಯ ಪ್ರಮುಖ ಕಾರ್ಯಕ್ರಮವಾಗಿದ್ದು ಆ ಕುರಿತು ವೆಚ್ಚವಾದ ಹಣದ ವಿವರ ಆಯವ್ಯವದಲ್ಲಿ ಕಂಡುಬರುವದಿಲ್ಲ.<br><br>d) ಈ ಹಂತದಲ್ಲಿ ವಿತ್ತಾಧಿಕಾರಿಗಳು, ಸುಮಾರು ಐದು ಕೋಟಿ ಮೊತ್ತದ ಬಿಲ್ಲುಗಳು ಆಯವ್ಯಯ ಅನಮೋದನೆಯಾಗದ ಕಾರಣ ಬಾಕಿ ಇವೆ ಎಂದು ತಿಳಿಸಿದರು.<br><br>e) ಕಳೆದ ವರ್ಷದ ಆಯವ್ಯಯದಲ್ಲಿ ಅವಕಾಶ ಕಲ್ಪಿಸಿದ್ದರೆ, ಅದರಂತೆ ವೆಚ್ಚಮಾಡಬಹುದೆಂದು ತಿಳಿಸಿ ಬಾಕಿ ಇರುವ ಬಿಲ್ಲುಗಳ ವಿವರ ಕುರಿತು ಟಿಪ್ಪಣಿ ನೀಡಬೇಕು ಅಥವಾ ಇನ್ನೊಂದು ಕಾಲಂನಲ್ಲಿ ಬಾಕಿ ಇರುವ ಬಿಲ್ಲುಗಳ ವಿವರ ನೀಡಬೇಕು<br><br>f) ಸ್ನಾತಕೋತ್ತರ ವ್ಯಾಸಂಗಗಳ ಸಾಮಾನ್ಯ ಪ್ರವೇಶ ಸಂದರ್ಭದಲ್ಲಿ ಮಹಾವಿದ್ಯಾಲಯಗಳಿಗೆ ಹಂಚಿಕೆಯಾದ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯ ಸ್ವೀಕರಿಸಿದ ಶುಲ್ಕದ ಮೊತ್ತ ಮಹಾವಿದ್ಯಾಲಯಗಳಿಗೆ ಮರುಪಾವತಿಯಾಗಿರುವುದಿಲ್ಲ. |

g) ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಸ್ಕ್ರೂಟಿನಿ ಶುಲ್ಕ, ಪರೀಕ್ಷಾ ಸಾದಿಲ್ವಾರು ಹಣ ಮಹಾವಿದ್ಯಾಲಯಗಳಿಗೆ ಮರುಪಾವತಿಯಾಗಬೇಕಾದೆ.

h) 2019-2020 ನೇ ಸಾಲಿನ ವಾರ್ಷಿಕ ವೆಚ್ಚಗಳು ಚಾರ್ಟರ್ಡ ಅಕೌಂಟೆಂಟ್ ರಿಂದ ಪರಿಶೀಲನೆ ಆಗದೇ ಇರುವುರಿಂದ ವಾರ್ಷಿಕ ವೆಚ್ಚಗಳನ್ನು ಒಪ್ಪಿಕೊಳ್ಳಲು ಆಗುವದಿಲ್ಲ.

i) ಕೆಲವೊಂದು ಶೀರ್ಷಿಕೆಗಳಾದ Advertisement, Student welfare ವೆಚ್ಚ ಕಡಿಮೆಯಾಗಿದ್ದು, ಈ ಕುರಿತು ಗಮನ ಹರಿಸ ಬೇಕು. ಸದಸ್ಯರು ನೀಡುವ ಸಲಹೆಗಳಂತೆ, ಆಯವ್ಯಯವನ್ನು ಸರಿಪಡಿಸುವ ಕೆಲಸವಾಗಬೇಕು.

j) ವೆಚ್ಚಗಳ ಆಡಿಟ್ ಆದರೆ, ವೆಚ್ಚಗಳ ನಿರ್ವಹಣೆಯಲ್ಲಿ ಆಗಿರಬಹುದಾದ ಲೋಪದೋಷಗಳ ಕುರಿತು ನಮೂದಿಸುತ್ತಾರೆ. ಅದರಿಂದ ಸರಿಪಡಿಸಲು ಅವಕಾಶ ದೊರೆಯುತ್ತದೆ ಎಂದು ತಿಳಿಸಿ, ಚಾರ್ಟರ್ಡ ಅಕೌಂಟೆಂಟ್ ನೇಮಕಕ್ಕೆ ಕೂಡಲೇ ಕ್ರಮ ಕೈಕೊಂಡು, ಒಬ್ಬರು ಚಾರ್ಟರ್ಡ ಅಕೌಂಟೆಂಟ್‌ರವನ್ನು ನೇಮಕಮಾಡಿ ಅವರಿಗೆ 4 ಜನ ಸಹಾಯಕರ ಸೇವೆಯನ್ನು ತಿಂಗಳಿಗೆ 25-30 ಸಾವಿರ ರೂಪಾಯಿಗಳ ಗೌರವಧನ ನೀಡಿ 2 ತಿಂಗಳ ಅವಧಿಗೆ ನೀಡಿ, ವಾರ್ಷಿಕ ವೆಚ್ಚಗಳನ್ನು ಕ್ರಮಬದ್ಧವಾಗಿ ಆಡಿಟ್ ಮಾಡಿಸಲು ಕ್ರಮಕೈಗೊಳ್ಳಬೇಕು. ಆ ವರದಿಯ ಜೊತೆಗೆ 2016-17, 2017-18, 2018-19 ಹಾಗೂ 2019-20 ನಾಲ್ಕು ವರ್ಷಗಳ ಲೆಕ್ಕಪತ್ರಗಳನ್ನು ಚಾರ್ಟರ್ಡ ಅಕೌಂಟೆಂಟ್‌ರಿಂದ ಆಡಿಟ್ ಮಾಡಿಸಿ ವೆಚ್ಚಗಳನ್ನು ದೃಢೀಕರಿಸಬೇಕು ಎಂದು ತಿಳಿಸಿದರು.

k) ಈ ಹಿಂದೆ ನೇಮಕಮಾಡಿದ ಚಾರ್ಟರ್ಡ ಅಕೌಂಟೆಂಟ್ ಅವರಿಗೆ ನೀಡಿದ ಸಂಭಾವನೆ / ಶುಲ್ಕ ಹಾಗೂ ಅವರು ಮಾಡಿರುವ ಲೆಕ್ಕ ತನಿಖೆ ಕುರಿತು ಮಾಹಿತಿ ನೀಡುವಂತೆ ಕೋರಲು, ವಿತ್ತಾಧಿಕಾರಿಗಳು ಹಿಂದಿನ ಚಾರ್ಟರ್ಡ ಅಕೌಂಟೆಂಟ್ ಅವರು ನೀಡಿದ ಲೆಕ್ಕ ತನಿಖೆ ತಖ್ತೆಗಳನ್ನು ಒದಗಿಸಿದರು. ಅವುಗಳ ಮೇಲೆ ಸಹಿ ಇರದೇ ಇರುವುದರಿಂದ ಮೂಲ ಆಡಿಟ್ ರಿಪೋರ್ಟಗಳನ್ನು ಪರಿಶೀಲಿಸುವಂತೆ ತಿಳಿಸಿದರು ಇದಲ್ಲದೆ ಹಣಕಾಸು ವಿಭಾಗದಲ್ಲಿ Tally Software ಇಲ್ಲದಿರುವುದನ್ನು ಗಂಭೀರವಾಗಿ ಪರಿಗಣಿಸಿ ಅದನ್ನು ಕೂಡಲೇ ಖರೀದಿಸುವಂತೆ ತಿಳಿಸಿದರು.

ವಿತ್ತಾಧಿಕಾರಿಗಳು ವಿವರಣೆ ನೀಡಿ ಗೌರವಾನ್ವಿತ ಸದಸ್ಯರ ಸಲಹೆಯಂತೆ ಕ್ರಮಕೈಕೊಳ್ಳಲಾಗುವುದು ಎಂದು ತಿಳಿಸಿ, ವಿಶ್ವವಿದ್ಯಾಲಯದ ಚಾರ್ಟರ್ಡ ಅಕೌಂಟೆಂಟ್ ರವರ 3 ವರ್ಷದ ಅವಧಿ ಮುಗಿದಿದ್ದು, ಈ ಕುರಿತು ಕೆಟಿಪಿಪಿ ಅಧಿನಿಯಮದ ಪ್ರಕಾರ ಚಾರ್ಟರ್ಡ ಅಕೌಂಟೆಂಟ್ ಹಾಗೂ ಇಬ್ಬರು ಸಹಾಯಕ ಸೇವೆ ಪಡೆಯಲು ಕ್ರಮ ಕೈಕೊಳ್ಳಬೇಕಾಗಿದೆ ಲೆಕ್ಕಪತ್ರದಲ್ಲಿ ಅನುಭವ ಹೊಂದಿರುವ ಸಿಬ್ಬಂದಿ ಕೊರತೆಯಿಂದ ಕೆಲಸ ನಿರ್ವಹಣೆಗೆ ತೊಂದರೆಯಾಗಿದೆ ಎಂದು ತಿಳಿಸಿದರು.

ಗೌರವಾನ್ವಿತ ಸದಸ್ಯರು ಹಿಂದಿನ ವರ್ಷಗಳ ಲೆಕ್ಕಪತ್ರ ವೆಚ್ಚಗಳ ಕುರಿತು ವಿವರಗಳನ್ನು ಕೇಳಿದ ಸಂದರ್ಭದಲ್ಲಿ ವಿತ್ತಾಧಿಕಾರಿಗಳು ಆಡಿದ ಮಾತಿಗೆ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು. ಗೌರವಾನ್ವಿತ ಸದಸ್ಯರಾದ ಡಾ. ಆರ್.ಕೆ.ಚಂದ್ರನಾಥ್ ರವರು ಹಣಕಾಸು ವಿಭಾಗದ ಸಿಬ್ಬಂದಿಗಳ ಕೊರತೆ ಇದ್ದರೆ ಕುಲಪತಿಗಳೊಂದಿಗೆ ಚರ್ಚಿಸಿ ಅಗತ್ಯವಾದ ಅನುಭವಿ ಸಿಬ್ಬಂದಿಗಳನ್ನು ಪಡೆಯಬಹುದು. ವಿತ್ತಾಧಿಕಾರಿಗಳು ಆಡಿದ ಮಾತಿನಿಂದ ಸದಸ್ಯರಿಗೆ ನೋವಾಗಿದ್ದರೆ ಅದಕ್ಕೆ ವಿಷಾದ ವ್ಯಕ್ತಪಡಿಸಿ ಕ್ಷಮೆ ಕೇಳಬೇಕೆಂದು ಹೇಳಿದರು. ಸದಸ್ಯರಾದ ಶ್ರೀ ಕರಣ್ ಕುಮಾರ್ ಅವರ ಸಲಹೆಯಂತೆ, ಒಬ್ಬ Auditor ಅವರನ್ನು ನೇಮಕಮಾಡಿ ಲೆಕ್ಕ ತನಿಖೆ ಮಾಡಿಸಲು ಕ್ರಮ ಕೈಕೊಳ್ಳಬೇಕೆಂದು ಹೇಳಿದರು.

| | |
|---|---|
| | ಈ ಷರತ್ತಿನ ಮೇಲೆ ಆಯವ್ಯಯ ಅನುಮೋದನೆ ಮಾಡಬಹುದೆಂದು ತಿಳಿಸಿದರು. ಸದಸ್ಯರ ಸಲಹೆಯಂತೆ ವಿತ್ತಾಧಿಕಾರಿಗಳು ವಿಷಾದ ವ್ಯಕ್ತಪಡಿಸಿ ಸದಸ್ಯರ ಕ್ಷಮೆ ಕೇಳಿದರು.<br>ಕುಲಸಚಿವರು ವಿವರಣೆ ನೀಡಿ, ಚಾರ್ಟರ್ಡ ಅಕೌಂಟೆಂಟ್ ನೇಮಕಾತಿ ವಿಶ್ವವಿದ್ಯಾಲಯದ ವಾರ್ಷಿಕ ವೆಚ್ಚದ ಮೇಲೆ ಅವಲಂಬಿತವಾಗುತ್ತದೆ. ಅದರ ಆಧಾರದ ಮೇಲೆ ಅವರಿಗೆ ನೀಡಬೇಕಾದ ಸಂಭಾವನೆ 1 ಲಕ್ಷಕ್ಕಿಂತ ಕಡಿಮೆಯಾದಲ್ಲಿ, ಕೋಟೇಶನ್ ಆಧಾರದ ಮೇಲೆ ನೇಮಕಮಾಡಬಹುದು. ಒಂದು ಲಕ್ಷಕ್ಕಿಂತ ಅಧಿಕವಾದರೆ, ಕೆಟಿಪಿಪಿ ಅಧಿನಿಯಮದ ಪ್ರಕಾರ ಟೆಂಡರ್ ಕರೆಯಬೇಕಾಗುತ್ತದೆ. ಸದಸ್ಯರ ಸಲಹೆಯಂತೆ ಚಾರ್ಟರ್ಡ ಅಕೌಂಟೆಂಟ್. ಅವರನ್ನು ಕೂಡಲೇ ನಿಯೋಜಿಸಿ, ಬಾಕಿ ಇರುವ ಎಲ್ಲಾ ಲೆಕ್ಕಪತ್ರಗಳನ್ನು ಪರಿಶೀಲನೆಗೆ ಒಳಪಡಿಸಿ, ಅವರು ನೀಡುವ ವರದಿಯ ಆಧಾರದ ಮೇಲೆ ವಾರ್ಷಿಕ ಲೆಕ್ಕ ಪತ್ರಗಳನ್ನು ಸಿದ್ಧಪಡಿಸಿ ಸಿಂಡಿಕೇಟ್ ಸಭೆಯ ಪರಿಶೀಲನೆಗೆ ಸಲ್ಲಿಸಲಾಗುವದು. ಸಧ್ಯಕ್ಕೆ 2020-21ನೇ ಸಾಲಿನ ಆಯವ್ಯಯ ಅಂದಾಜುಗಳಿಗೆ ಸಭೆ ಒಪ್ಪಿಗೆ ನೀಡಬೇಕೆಂದು ಕೋರಿದರು.<br>ಸುದೀರ್ಘ ಚರ್ಚೆಯ ನಂತರ ಸಿಂಡಿಕೇಟ್ ಸಭೆ ಕೆಳಗಿನಂತೆ ತೀರ್ಮಾನ ತೆಗೆದುಕೊಂಡಿತು.<br><br>ಸಿಂಡಿಕೇಟ್ ನಿರ್ಣಯ:<br><br>1. **2016-17, 2017-18 ಹಾಗೂ 2018-19 ಸಾಲಿನ ವಾರ್ಷಿಕ ಲೆಕ್ಕಪತ್ರಗಳ ಮತ್ತು 2019-20ನೇ ಸಾಲಿನ ವಾರ್ಷಿಕ ವೆಚ್ಚಗಳ ಲೆಕ್ಕ ಪತ್ರಗಳ ಆಡಿಟ್ ವರದಿಗಳನ್ನು ಮತ್ತು ವಾರ್ಷಿಕ ವರದಿಗಳನ್ನು ಸಲ್ಲಿಸದೇ ಇರುವುದರಿಂದ 2020-21 ನೇ ಸಾಲಿನ ಆಯವ್ಯಯದಲ್ಲಿರುವ ಆದಾಯ ಮತ್ತು ವೆಚ್ಚಗಳ ಅಂದಾಜುಗಳಿಗೆ (2019-20 ವಾರ್ಷಿಕ ವೆಚ್ಚಗಳನ್ನು ಹೊರತುಪಡಿಸಿ) ಅನುಮೋದನೆ ನೀಡಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.**<br>2. **2016-17, 2017-18, ಹಾಗೂ 2018-19 ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಮತ್ತು 2019-20ನೇ ಲೆಕ್ಕ ಪರಿಶೋಧನೆ ಹಾಗೂ ಲೆಕ್ಕಪತ್ರಗಳನ್ನು ಮುಂದಿನ ಅರವತ್ತು ದಿವಸಗಳಲ್ಲಿ ಸಿದ್ಧಪಡಿಸಿ ಸಿಂಡಿಕೇಟ್ ಸಭೆಯ ಪರಿಶೀಲನೆಗೆ ಮಂಡಿಸಬೇಕೆಂದು ತೀರ್ಮಾನಿಸಲಾಯಿತು.**<br>3. **2016-17 ನೇ ನಿಂದ 2019-20 ನೇ ಸಾಲಿನ ವೋಚರ್, ಲೆಕ್ಕ ಪುಸ್ತಕ ಹಾಗೂ ಲೆಕ್ಕಪತ್ರಗಳನ್ನು Tally Software ನಲ್ಲಿ ದಾಖಲಿಸಿ, ವಾರ್ಷಿಕ ಲೆಕ್ಕಪತ್ರ ಹಾಗೂ ಮೇಲಿನ ವರ್ಷಗಳಿಗೆ ಸಂಬಂಧಿಸಿದಂತೆ ವಾರ್ಷಿಕ ವರದಿಗಳನ್ನು ಸಿದ್ಧಪಡಿಸಲು, ನಾಲ್ಕು ಜನ ಅನುಭವ ಹೊಂದಿರುವ ಸಹಾಯಕರನ್ನು ಹಾಗೂ ಚಾರ್ಟರ್ಡ ಅಕೌಂಟೆಂಟ್ ಅವರನ್ನು ನೇಮಕ ಮಾಡಲು ಸಭೆ ಅನುಮೋದನೆ ನೀಡಿತು.**<br><br>**ಮೇಲೆ ನಮೂದಿಸಿದ ಪ್ರಕ್ರಿಯೆ 60 ದಿವಸಗಳಲ್ಲಿ ಪೂರ್ಣಗೊಳಿಸಿ, ಸಿಂಡಿಕೇಟ್ ಸಭೆಯ ಅನುಮೋದನೆಗೆ ಸಲ್ಲಿಸುವ ಜವಾಬ್ದಾರಿಯನ್ನು ವಿತ್ತಾಧಿಕಾರಿಗಳಿಗೆ ನೀಡಲಾಯಿತು.**<br><br>(ಕ್ರಮ: ವಿತ್ತಾಧಿಕಾರಿಗಳು ಹಾಗೂ ಕುಲಸಚಿವರು) |

| | |
|---|---|
| ವಿಷಯ ಸಂಖ್ಯೆ-11 | Campus Redevelopment - reg.<br>ಗೌರವಾನ್ವಿತ ಸದಸ್ಯರಾದ ಶ್ರೀ ಎಚ್. ಆರ್ ಸತೀಶ್‌ರವರು, ಈ ಪ್ರಸ್ತಾವನೆ ಕಾಮಗಾರಿ ಸಮಿತಿಯಲ್ಲಿ ಚರ್ಚೆ ಆಗಿಲ್ಲ. Master Plan ಸಿದ್ಧಪಡಿಸುವ ಸಲುವಾಗಿ Expression of Interest (EOI) ಕುರಿತು ಕಾಮಗಾರಿ ಸಭೆಯಲ್ಲಿ ಚರ್ಚೆಯಾಗಿ ಅದನ್ನು ಸಹ ಈ ಸಭೆಯ ಮುಂದೆ ಮಂಡಿಸಲಾಗಿದೆ. ಈಗ ಮಂಡಿಸಿರುವ ವಿಷಯದಲ್ಲಿ ಕೂಡ ವಾಸ್ತುಶಿಲ್ಪಿಗಳ ನೇಮಕಾತಿಯ ವಿಷಯವಿದೆ ಕಾರಣ ವಿವರಣೆ ಬಯಸಿದರು.<br>ಕುಲಪತಿಗಳು ವಿವರಣೆ ನೀಡಿ, Master Plan ಸಿದ್ಧಪಡಿಸುವ ಸಲುವಾಗಿ Expression of Interest (EOI) ವಿಷಯವನ್ನು ಕಾಮಗಾರಿ ಸಮಿತಿಯ ನಡಾವಳಿಗಳೊಂದಿಗೆ ಪ್ರತ್ಯೇಕವಾಗಿ ಮಂಡಿಸಿದ್ದು ಅದರ ಪ್ರಕಾರ ವಾಸ್ತುಶಿಲ್ಪಿಗಳ ನೇಮಕವಾಗಬೇಕಾಗಿದೆ ವಿಶ್ವವಿದ್ಯಾಲಯದಲ್ಲಿ ಪ್ರಾರಂಭಿಸಿರುವ ವಿವಿಧ ಹೊಸ ವಿಭಾಗಗಳಿಗೆ, ಕಟ್ಟಡಗಳೂ ಒಳಗೊಂಡಂತೆ ಮೂಲ ಸೌಕರ್ಯಗಳ ಅಗತ್ಯವಿದೆ. ವಿಶ್ವವಿದ್ಯಾಲಯದಲ್ಲಿ ಪೂರ್ಣ ಪ್ರಮಾಣದ ಇಂಜಿನಿಯರಿಂಗ್ ವಿಭಾಗ ಇಲ್ಲದಿರುವುದರಿಂದ ಸರ್ಕಾರದ ಲೋಕೋಪಯೋಗಿ ಇಲಾಖೆ ಅಥವಾ ಬೇರೆ ಸರ್ಕಾರಿ ಸಂಸ್ಥೆಗೆ ಈ ಕಾಮಗಾರಿ ಕೆಲಸ ವಹಿಸಲು ಉದ್ದೇಶಿಸಲಾಗಿದೆ. ಕಾಮಗಾರಿ ಸಮಿತಿ ಶಿಫಾರಸ್ಸು ಮಾಡಿದಂತೆ EOI ಅನುಮೋದನೆ ಹಾಗೂ ವಾಸ್ತು ಶಿಲ್ಪಿಗಳನ್ನು ನೇಮಕ ಮಾಡಬೇಕಾಗಿದೆ. ಈಗ ಪ್ರಸ್ತಾಪಿಸಿರುವ ಕಾಮಗಾರಿಗಳು ವಿಶ್ವವಿದ್ಯಾಲಯದ ಉಸ್ತುವಾರಿಗೆ ಒಳಪಟ್ಟಿರುತ್ತವೆ. ವಿಶ್ವವಿದ್ಯಾಲಯದಲ್ಲಿ ಪ್ರಸ್ತುತ ಶೇಖರಣೆಯಾಗಿರುವ ಸುಮಾರು 90 ಕೋಟಿ ಹಾಗೂ ಮುಂಬರುವ ವರ್ಷಗಳ ಉಳಿತಾಯ ಮತ್ತು ಸಿ.ಎಸ್.ಆರ್. ನಿಧಿ ಒಳಗೊಂಡಂತೆ ಸುಮಾರು 65 ಕೋಟಿ ರೂಪಾಯಿಗಳನ್ನು ಪರಿಗಣನೆಗೆ ತೆಗೆದುಕೊಂಡು ಪ್ರಥಮ ಹಂತದ ಕಾಮಗಾರಿ ಕೈಗೆತ್ತಿಕೊಳ್ಳಬಹುದಾಗಿದೆ. ವಿಶ್ವವಿದ್ಯಾಲಯದಲ್ಲಿರುವ ಉಳಿಕೆ ಹಣ ಖರ್ಚುಮಾಡದೇ ಇದ್ದರೆ ಸರ್ಕಾರ ಅಥವಾ ಬೇರೆ ಸಂಸ್ಥೆಗಳ ಅನುದಾನ ಕೇಳಲು ಸಾಧ್ಯವಾಗುವುದಿಲ್ಲ ಎಂದು ತಿಳಿಸಿದರು.<br>ಗೌರವಾನ್ವಿತ ಸದಸ್ಯರಾದ ಶ್ರೀ ಕರಣ್‌ಕುಮಾರ್ ಉಳಿಕೆ ಹಣವನ್ನು ಖರ್ಚು ಮಾಡದೇ ಮುಂದಕ್ಕೆ ಹಾಕಿದರೆ, Tax ಕಟ್ಟಬೇಕಾಗುತ್ತದೆ ಬೇರೆ ವಿಶ್ವವಿದ್ಯಾಲಯಗಳು ಈ ರೀತಿ ಸಾಕಷ್ಟು ತೊಂದರೆ ಅನುಭವಿಸಿವೆ. ಆದರೆ Master Plan ಇಲ್ಲದೆ ಈ ಪ್ರಸ್ತಾವನೆಗೆ ಒಪ್ಪಿಗೆ ನೀಡುವುದು ಸರಿಯಲ್ಲವೆಂದು ತಿಳಿಸಿದರು. ಈ 225 ಕೋಟಿ ಹಣದ ಈ ಯೋಜನೆಯಲ್ಲಿ ವಿಶ್ವವಿದ್ಯಾಲಯ ಹಾಗೂ ಸರ್ಕಾರದ ಪಾತ್ರ ಕುರಿತು ಮಾಹಿತಿ ಬಯಸಿದರು. ಕಾರ್ಪೋರೇಟ್ ಸಂಸ್ಥೆಗಳಿಗೆ ಸಂಪರ್ಕಿಸಿದರೆ, ಅವರು ಸಹ ಕಟ್ಟಡ ನಿರ್ಮಿಸಿ ಕೊಡಲು ಮುಂದೆ ಬರಬಹುದು. ಪ್ರಸ್ತಾವನೆಯಲ್ಲಿ ಸೂಚಿಸಿದ ಮೊತ್ತ ಕಟ್ಟಡ ನಿರ್ಮಾಣದ ಒಟ್ಟು ವಿಸ್ತೀರ್ಣ ಹಾಗೂ SR ದರಕ್ಕೆ ಹೊಂದಾಣಿಕೆ ಆಗುವದಿಲ್ಲ, ಅಲ್ಲದೆ Landscaping ಸ್ಥಳದ ವಿವರಣೆ ಇಲ್ಲ, ಸರ್ಕಾರದ ಇಲಾಖೆ DPR ಸಿದ್ಧಪಡಿಸುವುದಕ್ಕೆ ಮೊದಲು ನಾವು Plan ಕೊಡಬೇಕು. ಕಾರಣ ಈ ಕಾಮಗಾರಿಗಳಿಗಾಗಿ ರೂ.155 ಕೋಟಿ ಮೊತ್ತ ಪ್ರತ್ಯೇಕವಾಗಿಟ್ಟು ಈ ಮೊತ್ತದಲ್ಲಿ ಯಾವ ಯಾವ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕು ಎನ್ನುವುದರ ಕುರಿತು ನಂತರ ತೀರ್ಮಾನಿಸಬಹುದು ಎಂದು ತಿಳಿಸಿದರು. |

ಗೌರವಾನ್ವಿತ ಸದಸ್ಯರಾದ ಡಾ. ವಿ. ಆರ್. ದೇವರಾಜ್ ಹಾಗೂ ಶ್ರೀಮತಿ ಜ್ಯೋತಿ ವಿಜಯ್ ರವರು ವಿದ್ಯಾರ್ಥಿ / ವಿದ್ಯಾರ್ಥಿನಿಯರ ವಸತಿಗೃಹ ಕಟ್ಟಡ ನಿರ್ಮಾಣವನ್ನು ಪ್ರಥಮ ಹಂತದ ಕಾಮಗಾರಿಗಳಲ್ಲಿ ಸೇರಿಸಬೇಕು ಎಂದು ಹೇಳಿದರು.

ಗೌರವಾನ್ವಿತ ಸದಸ್ಯರಾದ ಶ್ರೀ ಹೆಚ್. ಟಿ. ಅರವಿಂದ್ ರವರು, ಈ ತರಹದ ಯೋಜನೆಗಳನ್ನು ಸರ್ಕಾರಕ್ಕೆ ಸಲ್ಲಿಸುವ ಪೂರ್ವದಲ್ಲಿ ಸಿಂಡಿಕೇಟ್ ಗಮನಕ್ಕೆ ತರಬೇಕಾಗಿತ್ತು ಸರ್ಕಾರದೊಂದಿಗೆ ಚರ್ಚೆಯ/Presentation ಸಂದರ್ಭದಲ್ಲಿ ಸಿಂಡಿಕೇಟ್ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸದಸ್ಯರಿಗೆ ಪೂರ್ವಭಾವಿ ಮಾಹಿತಿ ಒದಗಿಸಿದ್ದಲ್ಲಿ ಹೆಚ್ಚಿನ ಚರ್ಚೆಯ ಅಗತ್ಯ ಇರುತ್ತಿರಲಿಲ್ಲ. ಈ ಅಭಿವೃದ್ಧಿ ಯೋಜನೆಗೆ ವಿರೋಧವಿಲ್ಲ, ವಿಧಿವಿಧಾನಗಳನ್ನು ಅನುಸರಿಸಿ ಮುಂದುವರೆಯಬೇಕು ಎಂದು ತಿಳಿಸಿದರು.

ಕುಲಸಚಿವರು ಯೋಜನೆಯ ಕುರಿತು ವಿವರಗಳನ್ನು ನೀಡಿ ಈ ಪ್ರಸ್ತಾವನೆಯಲ್ಲಿ ಸುಮಾರು 8000 sft ಅಳತೆಯ ಶೈಕ್ಷಣಿಕ ಕಟ್ಟಡ, ಕ್ರೀಡಾ ಸಂಕೀರ್ಣ, ಹಾಲಿ ಕಟ್ಟಡಗಳ ದುರಸ್ತಿ ಮತ್ತು ನವೀಕರಣ ಸೌರಶಕ್ತಿ ಯೋಜನೆ, ಉದ್ಯಾನವನ, ಆವರಣದ ಸುಂದರಿಕರಣ Land Scaping, ರಸ್ತೆ ನಿರ್ಮಾಣ, ಇತ್ಯಾದಿಗಳು ಒಳಗೊಂಡಿದೆ. ಇದು ಒಂದು ಪ್ರಾರಂಭ ಮಾತ್ರ, ಸಿಂಡಿಕೇಟ್ ಒಪ್ಪಿಗೆ ನೀಡಿದ ನಂತರ ಮುಂದಿನ ಆಡಳಿತಾತ್ಮಕ ಪ್ರಕ್ರಿಯೆ ಮುಗಿಯಬೇಕಾದರೆ ಇನ್ನು 8-10 ತಿಂಗಳು ಬೇಕಾಗುತ್ತದೆ. ಸರ್ಕಾರದಿಂದ ನಿರ್ಧಾರವಾಗುವ ಲೋಕೋಪಯೋಗಿ ಇಲಾಖೆ ಅಥವಾ ಬೇರೆ ಸಂಸ್ಥೆ DPR ಸಿದ್ಧಪಡಿಸಬೇಕು ಅದು ಸಿಂಡಿಕೇಟ್ ಸಭೆಯ ಪರಿಶೀಲನೆಗೆ ಬರಬೇಕು. ಸರ್ಕಾರದ ಮಂತ್ರಿಮಂಡಳದ ಅನಮೋದನೆಯಾಗಬೇಕು. ಇದಕ್ಕೆ ಸಾಕಷ್ಟು ಸಮಯವಾಗುತ್ತದೆ. ಈಗಿರುವ ಹಣ ಹಾಗೂ ಮುಂದಿನ 2-3 ವರ್ಷಗಳ ವಿಶ್ವವಿದ್ಯಾಲಯದ ಸಂಪನ್ಮೂಲ ಹಾಗೂ CSR ನಿಧಿ ಇವುಗಳ ಗಮನದಲ್ಲಿಟ್ಟುಕೊಂಡು ಈ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ತಿಳಿಸಿದರು.

ಸಿಂಡಿಕೇಟ್ ನಿರ್ಣಯ:

1. ವಿಶ್ವವಿದ್ಯಾಲಯದಲ್ಲಿ ಲಭ್ಯವಿರುವ ರೂ. 90 ಕೋಟಿ (ತೊಂಭತ್ತು ಕೋಟಿ) ಹಾಗೂ ಬರುವ ವರ್ಷಗಳ ಉಳಿತಾಯದ ಮೊತ್ತ 65 ಕೋಟಿ (ಅರವತ್ತೈದು ಕೋಟಿ) ಒಟ್ಟು 155 ಕೋಟಿ (ಒಂದು ನೂರ ಐವತ್ತೈದು ಕೋಟಿ) ಮೊತ್ತದಲ್ಲಿ ವಿಶ್ವವಿದ್ಯಾಲಯದ ವಾಸ್ತುಶಿಲ್ಪಿಗಳು ನೀಡುವ ವಿನ್ಯಾಸದಂತೆ, ಸರ್ಕಾರ ನಿರ್ಧರಿಸುವ ಸಂಸ್ಥೆಯಿಂದ ವಿವರವಾದ ಯೋಜನಾ ವರದಿಯನ್ನು ಸಿದ್ದಪಡಿಸಿ ಸಿಂಡಿಕೇಟ್ ಅನುಮೋದನೆ ಪಡೆಯಲು ಹಾಗೂ ಸದರಿ ಸಂಸ್ಥೆಯಿಂದ ಪ್ರಥಮ ಹಂತದ ಕಾಮಗಾರಿಗಳನ್ನು ನಿರ್ವಹಿಸಲು ಸಿಂಡಿಕೇಟ್ ಸಭೆ ಸರ್ವಾನುಮತದ ಒಪ್ಪಿಗೆ ನೀಡಿತು. ಎರಡನೇ ಹಂತದ ರೂ.70 ಕೋಟಿ ಮೊತ್ತದ ಕಾಮಗಾರಿಗಳ ಕುರಿತು ನಂತರ ತೀರ್ಮಾನಿಸಲಾಗುವುದು.

| | |
|---|---|
| | 2. ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ವಸತಿ ಗೃಹ ಕಟ್ಟಡವನ್ನು ಸಹ ಪ್ರಥಮ ಹಂತದಲ್ಲಿ ಕೈಗೆತ್ತಿಕೊಳ್ಳಲು ಹಾಗೂ ಇದಕ್ಕಾಗಿ ರಾಜ್ಯ ಸರ್ಕಾರ ಈಗಾಗಲೇ ಅನುಮೋದನೆ ನೀಡಿರುವ ಅನುದಾನದ ಜೊತೆಗೆ ಹಚ್ಚಿನ ಅನುದಾನ ಪಡೆದು ನಿರ್ಮಾಣ ಕಾಮಗಾರಿ ಕೈಗೆತ್ತಿಗೊಳ್ಳಬೇಕೆಂದು ತೀರ್ಮಾನಿಸಲಾಯಿತು.<br>(ಕ್ರಮ: ವಿತ್ತಾಧಿಕಾರಿಗಳು ಹಾಗೂ ಕುಲಸಚಿವರು) |
| ವಿಷಯ ಸಂಖ್ಯೆ-13 | ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದಲ್ಲಿ "Centre for Advanced Studies, Professional Education & Research" (CASPER) ಸ್ಥಾಪಿಸಲು ವಿಶ್ವವಿದ್ಯಾಲಯ ಧನಸಹಾಯ ಆಯೋಗದ ಮಾರ್ಗಸೂಚಿಗಳ ಅಡಿಯಲ್ಲಿ ರಚಿಸಲಾದ ಕರಡು ಪರಿನಿಯಮಾವಳಿಗಳ (Statutes) ಅನುಮೋದನೆ ಕುರಿತು.<br><br>ಕುಲಪತಿಗಳು CASPER ರೂಪುರೇಷೆಗಳ ಕುರಿತು ವಿವರಗಳನ್ನು ಸಭೆಗೆ ಒದಗಿಸಿದರು. ಈ ಸಂಸ್ಥೆ Multidisciplinary ಸ್ವರೂಪ ಹೊಂದಿದ್ದು ವಿಶ್ವವಿದ್ಯಾಲಯದ ನಿಯಂತ್ರಣದಲ್ಲಿರುವ ಸ್ವಾಯತ್ತ ಸಂಸ್ಥೆಯಾಗಿ ರೂಪಿಸಲು ಯೋಜಿಸಲಾಗಿದೆ. Data Science, Data Analytics, Cyber Science, Film Making, IOT ಮುಂತಾದ ನವೀನ PG Diploma, ಕೋರ್ಸುಗಳನ್ನು ಉದ್ಯಮಗಳ ಸಹಭಾಗಿತ್ವದಲ್ಲಿ ಪ್ರಾರಂಭಿಸಲು ಯೋಜಿಸಲಾಗಿದೆ. ಈ ಸಂಸ್ಥೆ, ಸರ್ಕಾರ ಮತ್ತು UGC ಯವರಿಂದ (ಪ್ರಾಜೆಕ್ಟ್) ಯೋಜನೆಗಳನ್ನು ತೆಗೆದುಕೊಂಡು ಸಂಶೋಧನೆಗೆ ಅವಕಾಶ ಕಲ್ಪಿಸಲಾಗುವುದು. ಯು.ಜಿ.ಸಿಯವರ ಇಂಡಸ್ಟ್ರಿ ಯುನಿವರ್ಸಿಟಿ ಲಿಂಕೇಜ್ ಕಾರ್ಯಕ್ರಮಕ್ಕೆ ಪೂರಕವಾಗಿ ಈ ಸಂಸ್ಥೆ ರೂಪಿಸಲಾಗುತ್ತದೆ ಎಂದು ತಿಳಿಸಿದರು.<br><br>ಗೌರವಾನ್ವಿತ ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್ ರವರು. ನಮ್ಮ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳು ಕೂಡ ಬೇರೆ ಬೇರೆ ಸಂಸ್ಥೆಗಳಿಂದ ಯೋಜನೆಗಳಿಗೆ ಪ್ರಯತ್ನ ಮಾಡುವುದರಿಂದ CASPER ಜೊತೆಗೆ ಸ್ಪರ್ಧೆಗೆ ಅವಕಾಶ ನೀಡಿದಂತಾಗುತ್ತದೆ. ಈ ಸಂಸ್ಥೆಯ ಸ್ವರೂಪ ನೋಡಿದರೆ ಉದ್ಯಮಗಳನ್ನು ಮತ್ತು Practitioners ಗಳನ್ನು ಇದರಲ್ಲಿ ತೊಡಗಿಸಿಕೊಳ್ಳಬೇಕಾಗುತ್ತದೆ. ಇದಕ್ಕಾಗಿ ನೈಪುಣ್ಯತೆ ಹೊಂದಿದ ಶಿಕ್ಷಕರ ಅಗತ್ಯವಿದೆ. ವೃತ್ತಿ ಕುಶಲತೆ ಹಾಗೂ ಬೋಧನಾ ನೈಪುಣ್ಯತೆಗಾಗಿ ಪ್ರತ್ಯೇಕವಾದ ವ್ಯವಸ್ಥೆ ಆಗಬೇಕು ಅಲ್ಲದೆ ಇದು ಬೇರೆ ವಿಭಾಗಗಳಗೆ ಹೊರತು ಪಡಿಸಿ ಪ್ರತ್ಯೇಕವಾದ ಸಂಸ್ಥೆಯಾಗಬೇಕು ಎಂದು ಹೇಳಿದರು.<br><br>ಗೌರವಾನ್ವಿತ ಸದಸ್ಯರಾದ ಡಾ. ವಿ. ಆರ್. ದೇವರಾಜ್ ರವರು ಇದಕ್ಕೆ ಸಂಬಂಧಿಸಿದಂತೆ ಪಠ್ಯಕ್ರಮ ರೂಪಿಸುವಲ್ಲಿ ತಾವು ಭಾಗವಹಿಸಿದ್ದು, ಈ ಪಠ್ಯಕ್ರಮಗಳು ಪ್ರಮುಖವಾಗಿ ಕಾಮರ್ಸ್ ಮತ್ತು ಇಂಜಿನಿಯರಿಂಗ್ ವ್ಯಾಸಂಗಗಳಿಗೆ ಸಂಬಂಧಿಸಿದ್ದಾಗಿದೆ. ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಈ ವಿಷಯ ಚರ್ಚೆಗೆ ಬಂದಾಗ ಪರಿನಿಯಮದ ಜೊತೆಗೆ ಇರುವ MoU ಹೊರತು ಪಡಿಸಿ, ಈ ಸಂಸ್ಥೆ ಸಂಪೂರ್ಣವಾಗಿ ವಿಶ್ವವಿದ್ಯಾಲಯದ ನಿಯಂತ್ರಣದಲ್ಲಿ ಇರುವ ಶರತ್ತು ವಿಧಿಸಿ ಅನುಮೋದನೆ ನೀಡಲಾಗಿದೆ. ಯಾವುದೇ ಬಾಹ್ಯ ಏಜೆನ್ಸಿಯವರ ಅಧೀನದಲ್ಲಿ ಸಂಸ್ಥೆ ಇರುವುದು ಸರಿಯಲ್ಲವೆಂದು |

| | |
|---|---|
| | ತಿಳಿಸಿ, ವಿಶ್ವವಿದ್ಯಾಲಯ ಅಗತ್ಯ ಪ್ರಯೋಗಾಲಯ ಹಾಗೂ ಪರಿಕರಗಳನ್ನು ನೀಡಿ CASPER ಸ್ಥಾಪಿಸಿ PG Diploma ವ್ಯಾಸಂಗಕ್ಕೆ ಅವಕಾಶ ನೀಡಿ (Professional Competancy) ವೃತ್ತಿ ನೈಪುಣ್ಯತೆ ಹೆಚ್ಚಿಸಲು ಪ್ರಯತ್ನಿಸಬೇಕು ಎಂದು ತಿಳಿಸಿದರು.<br><br>ಗೌರವಾನ್ವಿತ ಸದಸ್ಯರಾದ ಡಾ. ಬಿ. ಎ. ಅನುರಾಧ ಡಾ. ಇ. ಬಿ. ರಾಜೇಶ್‌ರವರು CASPER ಉದ್ದೇಶ ಹಾಗೂ ಯೋಜನೆ ಸರಿಯಾಗಿದೆ MoU ಹೊರತು ಪಡಿಸಿ ಪರಿನಿಯಮಗಳನ್ನು ಒಪ್ಪಿಕೊಳ್ಳಲು ಈಗಾಗಲೇ ವಿದ್ಯಾವಿಷಯಕ ಪರಿಷತ್ತಿನ ಸಭೆಯಲ್ಲಿ ನಿರ್ಣಯಿಸಲಾಗಿದೆ. ಅದರಂತೆ ಅಗತ್ಯ ತಿದ್ದುಪಡಿ ಮಾಡಿ ಒಪ್ಪಿಗೆ ನೀಡಬೇಕೆಂದು ಹೇಳಿದರು.<br><br>ಗೌರವಾನ್ವಿತ ಸದಸ್ಯರಾದ ಶ್ರೀ ಕುರಣ್‌ಕುಮಾರ್ ಪ್ರಸ್ತಾವನೆಯನ್ನು ಸ್ವಾಗತಿಸಿದರು, ಈ ವ್ಯಾಸಂಗಗಳನ್ನು ಬೋಧಿಸಲು ಅರ್ಹ ಹಾಗೂ ಸಮರ್ಥ ಅಧ್ಯಾಪಕರನ್ನು ಈ ಸಂಸ್ಥೆ ಹೊಂದಬೇಕು, ಆ ಕುರಿತು ವ್ಯವಸ್ಥಿತ ಪ್ರಯತ್ನ ಆಗಬೇಕು ಎಂದು ತಿಳಿಸಿದರು.<br><br>ಗೌರವಾನ್ವಿತ ಸದಸ್ಯರಾದ ಶ್ರೀ ಟಿ. ಹೆಚ್. ಶ್ರೀನಿವಾಸಯ್ಯ ಚರ್ಚೆಯ ಹಿನ್ನಲೆಯಲ್ಲಿ ಪರಿನಿಯಮಗಳಿಗೆ ಸೂಕ್ತ ಬದಲಾವಣೆ ಆಗಬೇಕಾಗಿದೆ ಕಾರಣ ಸೂಕ್ತ ತಿದ್ದುಪಡಿಯಾಗಿ ಪರಿನಿಯಮ ರಚನಾ ಸಮಿತಿಯ ಪರಿಶೀಲನೆಗೆ ಕಳುಹಿಸಬೇಕು.<br>**ಸಿಂಡಿಕೇಟ್ ನಿರ್ಣಯ:**<br>**(1) ವಿಶ್ವವಿದ್ಯಾಲಯದ ಸಂಪೂರ್ಣ ನಿಯಂತ್ರಣದಲ್ಲಿ CASPER ಸಂಸ್ಥೆಯನ್ನು ವಿಶ್ವವಿದ್ಯಾಲಯದ ಆವರಣದಲ್ಲಿ ಸ್ಥಾಪಿಸಲು ಸಿಂಡಿಕೇಟ್ ಸಭೆ ಅನುಮೋದನೆ ನೀಡಿತು.**<br>**(2) ಕರಡು ಪರಿನಿಯಮಗಳಲ್ಲಿ ಒಡಂಬಡಿಕೆ ಪತ್ರ (MoU) ಹೊರತು ಪಡಿಸುವ ಹಾಗೂ ವಿಶ್ವವಿದ್ಯಾಲಯದ ನಿಯಂತ್ರಣ ಹೊಂದುವ ಅಂಶಗಳನ್ನು ಅಳವಡಿಸಿ ಅಗತ್ಯ ಮಾರ್ಪಾಡುಗಳನ್ನು ಮಾಡಲು, ಪರಿನಿಯಮಗಳ ರಚನಾ ಸಮಿತಿಗೆ ಕಳುಹಿಸಲು ತೀರ್ಮಾನಿಸಲಾಯಿತು.**<br><br>**(ಕ್ರಮ: ಕುಲಸಚಿವರು, ವಿತ್ತಾಧಿಕಾರಿಗಳು ಹಾಗೂ ಅಧ್ಯಕ್ಷರು, ರಸಾಯನಶಾಸ್ತ್ರ ವಿಭಾಗ)** |
| ವಿಷಯ ಸಂಖ್ಯೆ–14 | ದಿನಾಂಕ 17.03.2020 ರಂದು ಜರುಗಿದ ಕಾಮಗಾರಿ ಸಮಿತಿ ಸಭೆಯ ನಡಾವಳಿಗಳನ್ನು ಅನುಮೋದಿಸುವ ಕುರಿತು.<br><br>ಗೌರವಾನ್ವಿತ ಸದಸ್ಯರಾದ ಶ್ರೀ ಹೆಚ್.ಆರ್. ಸತೀಶ್ ರವರು ಹಿಂದಿನ ಕಾಮಗಾರಿ ಸಮಿತಿ ಸಭೆಗಳ ವಿವರ ನೀಡಿ ಸದರಿ ನಡಾವಳಿಗಳು ಕಳೆದ ಸಲ ಸಿಂಡಿಕೇಟ್ ಸಭೆಯ ಪರಿಶೀಲನೆಗೆ ಬಂದಾಗ ಅವುಗಳನ್ನು ಕಾಮಗಾರಿ ಸಮಿತಿ ಸಭೆಯ ಪುನರ್ ಪರಿಶೀಲನೆಗೆ ಕಳುಹಿಸಲು ತೀರ್ಮಾನಿಸಲಾಗಿತ್ತು. ಕಾಮಗಾರಿಗಳ III Party Inspection ಲೋಕೋಪಯೋಗಿ ಇಲಾಖೆಯಿಂದ ಮಾಡಿಸಿ ಬಿಲ್ಲು ಪಾವತಿ ಮಾಡಲು ಶಿಫಾರಸ್ಸುಮಾಡಿದೆ, ಕಾಲಕಾಲಕ್ಕೆ ಕಾಮಗಾರಿ ಸಮಿತಿ ಸಭೆಗಳು ಜರುಗಿಸಿ ಅನುಮೊದನೆ ಪಡೆಯ ಬೇಕು ಎಂದು ತಿಳಿಸಿದರು. |

| | |
|---|---|
| | ಕುಲಪತಿಗಳು ವಿವರಣೆ ನೀಡಿ ನೂತನವಾಗಿ ಪ್ರಾರಂಭಿಸಲಾದ ವಿಭಾಗಗಳ ತರಗತಿಗಳು ಪ್ರಾರಂಭಿಸುವ ಅಗತ್ಯವಿದ್ದ ಕಾರಣ, ಹಾಗೂ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದ ಕಾರಣ ಸಭೆಗಳನ್ನು ಜರುಗಿಸಲು ಸಾಧ್ಯವಾಗಲಿಲ್ಲ. ಈಗಿರುವ ಕಟ್ಟಡಗಳು ಶಿಥಿಲಾವಸ್ಥೆಯಲ್ಲಿದ್ದು ಕಾರಣ ಅತ್ಯಂತ ಅಗತ್ಯವಾದ ಕೆಲವು ಕಟ್ಟಡಗಳನ್ನು ಮಾತ್ರ ರಿಪೇರಿ ಮಾಡಿಸಲಾಗಿದೆ.<br><br>ಗೌರವಾನ್ವಿತ ಸದಸ್ಯರಾದ ಡಾ. ಇ.ಬಿ.ರಾಜೇಶ್ ರವರು ಮಾತನಾಡಿ, ವಿಶ್ವವಿದ್ಯಾಲಯದ ಶೌಚಾಲಯ ಒಳಗೊಂಡಿರುವ ಕಟ್ಟಡಗಳು ಬಹಳಾ ಶೋಚನೀಯ ಸ್ಥಿತಿಯಲ್ಲಿದ್ದು, ಇವುಗಳ ರಿಪೇರಿ ಸಹಿತ ಕೂಡಲೆ ಅಗಬೇಕಾಗಿದೆ ಎಂದು ತಿಳಿಸಿದರು.<br><br>**ಸಿಂಡಿಕೇಟ್ ನಿರ್ಣಯ:**<br>**ಚರ್ಚೆಯ ನಂತರ ದಿನಾಂಕ 17.03.2020 ರಂದು ಜರುಗಿದ ಕಾಮಗಾರಿ ಸಮಿತಿ ಸಭೆಯ ನಡಾವಳಿಗಳಿಗೆ ಸಿಂಡಿಕೇಟ್ ಸಭೆ ಸರ್ವಾನುಮತದ ಅನುಮೋದನೆ ನೀಡಿತು.**<br><br>(ಕ್ರಮ: ಕುಲಸಚಿವರು, ವಿತ್ತಾಧಿಕಾರಿಗಳು ಹಾಗೂ ಅಭಿಯಂತರ ವಿಭಾಗ) |
| ವಿಷಯ ಸಂಖ್ಯೆ–15 | ದಿನಾಂಕ 20.05.2020 ರಂದು ಜರುಗಿದ ಖರೀದಿ ಸಮಿತಿ ಸಭೆಯ ನಡಾವಳಿಗಳನ್ನು ಅನುಮೋದಿಸುವ ಕುರಿತು<br><br>ಗೌರವಾನ್ವಿತ ಸದಸ್ಯರಾದ ಶ್ರೀ ಟಿ.ಹೆಚ್. ಶ್ರೀನಿವಾಸಯ್ಯ ನವರು ಉತ್ತರ ಪತ್ರಿಕೆಗಳ ಶುಲ್ಕ ಹಾಗೂ ದರಗಳು ಕುರಿತಂತೆ ಕೋರಿದ ಮಾಹಿತಿಯನ್ನು ಮತ್ತು ಗೌರವಾನ್ವಿತ ಸದಸ್ಯರಾದ ಡಾ. ಇ.ಬಿ.ರಾಜೇಶ್ ರವರು ಅಂಕಪಟ್ಟಿಗಳನ್ನು ಕಾಲೇಜಿಗೆ ನೀಡುವಲ್ಲಿ ವಿಳಂಬ ಕುರಿತಂತೆ ಕುಲಸಚಿವರು (ಮೌಲ್ಯಮಾಪನ) ರವರು ವಿವರಣೆ ನೀಡಿದರು.<br><br>ಗೌರವಾನ್ವಿತ ಸದಸ್ಯರಾದ ಡಾ: ಹೆಚ್.ಟಿ. ಅರವಿಂದ್ ರವರು ತಾವು ಕೇಂದ್ರೀಯ ಖರೀದಿ ಸಮಿತಿ ನಡಾವಳಿಗಳ ವಿಷಯ ಸಂಖ್ಯೆ 7, 9, 11, 14, 15 ಹಾಗೂ 16 ರ ಶಿಫಾರಸ್ಸುಗಳಿಗೆ ನೀಡಿದ ಆಕ್ಷೇಪಣೆಗಳ ಕುರಿತು ತಿಳಿಸಿದರು. ಸದರಿ ವಿಷಯಗಳನ್ನು ಹೊರತು ಪಡಿಸಿ ಉಳಿದ ನಡಾವಳಿಗಳಿಗೆ ಒಪ್ಪಿಗೆ ನೀಡಲು ಸದಸ್ಯರು ಸಹಮತಿಸಿದರು.<br><br>ಸಿಂಡಿಕೇಟ್ ನಿರ್ಣಯ:<br><br>**ಕೇಂದ್ರೀಯ ಖರೀದಿ ಸಮಿತಿಯ ಸದಸ್ಯರಾದ ಡಾ: ಹೆಚ್.ಟಿ. ಅರವಿಂದ್ ರವರು ವಿಷಯ ಸಂಖ್ಯೆ 7, 9, 11, 14, 15 ಮತ್ತು 16 ಕುರಿತಂತೆ ನೀಡಿದ ಅಭಿಪ್ರಾಯಗಳನ್ನು ಪರಿಗಣಿಸಿ ಅವುಗಳನ್ನು ಹೊರತು ಪಡಿಸಿ ದಿನಾಂಕ 20.05.2020 ರಂದು ಜರುಗಿದ ಕೇಂದ್ರೀಯ ಖರೀದಿ ಸಮಿತಿ ಸಭೆಯ ನಡಾವಳಿಗಳನ್ನು ಅನುಮೋದಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.**<br><br>(ಕ್ರಮ: ವಿತ್ತಾಧಿಕಾರಿಗಳು ಹಾಗೂ ಕುಲಸಚಿವರು) |

| | |
|---|---|
| ವಿಷಯ ಸಂಖ್ಯೆ-16 | Online Guided Internship- To consider draft Memorandum of Understanding with Clock Work Services-reg.<br><br>Online Guided Internship ಕುರಿತು ಕುಲಪತಿಗಳು ಸಭೆಗೆ ವಿವರಿಸಿದರು. ಕೆಲವು ಸದಸ್ಯರು ಇದು ಒಂದು ಒಳ್ಳೆಯ ಯೋಜನೆ ಎಂದು ತಿಳಿಸಿದರು. ಇನ್ನು ಕೆಲವು ಸದಸ್ಯರು ಈಗಾಗಲೇ ಇಂತಹ ಹಲವಾರು ಸಂಸ್ಥೆಗಳು ಈ ತರಹದ ಸೇವೆ ನೀಡುತ್ತಿವೆ. ಇದನ್ನು ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಅನ್ವಯಿಸಬಹುದೆಂದು ಅಭಿಪ್ರಾಯ ಪಟ್ಟರು. ಈ ಪ್ರಕ್ರಿಯೆಯಲ್ಲಿ ಯಾವುದೇ ತಪ್ಪು ಅಥವಾ ಅಪರಾಧ ಸಂಭವಿಸಿದರೆ ಅದಕ್ಕೆ ಇಂತಹ ಸಂಸ್ಥೆಗಳನ್ನು ಹೊಣೆಗಾರರಾಗಿಸ ಬೇಕಾಗುತ್ತದೆ ಎಂದು ಅಭಿಪ್ರಾಯ ಪಟ್ಟರು. ಸಾವಿರಾರು ವಿದ್ಯಾರ್ಥಿಗಳನ್ನು ಮಾನಿಟರ್ ಮಾಡುವುದು ಕಷ್ಟವೆಂದು ತಿಳಿಸಿದರು ಹಾಗೂ ದತ್ತಾಂಶಗಳ ಸುರಕ್ಷತೆ ಹಾಗೂ ದುರ್ಬಳಿಕೆ ಕುರಿತು ಎಚ್ಚರಿಕೆ ವಹಿಸ ಬೇಕಾಗುತ್ತದೆ ಎಂದು ತಿಳಿಸಿದರು. ಈ ಸಂಸ್ಥೆ ಅಲ್ಲದೇ ಬೇರೆ ಸಂಸ್ಥೆಗಳು ಈ ಸೇವೆ ಉಚಿತವಾಗಿ ನೀಡಲು ಮುಂದೆ ಬಂದರೆ ಅವುಗಳನ್ನು ಪರಿಗಣಿಸ ಬೇಕಾಗುತ್ತದೆ. ಇಂತಹ ವಿಷಯಗಳ ಪ್ರಸ್ತಾಪನೆಗಳನ್ನು ಮೊದಲು ಸಿಂಡಿಕೇಟ್ ಗಮನಕ್ಕೆ ತಂದು ಒಪ್ಪಿಗೆ ಪಡೆದು ನಂತರ ವಿಧಿವಿಧಾನಗಳನ್ನು ಅನುಸರಿಸಿ ಪ್ರಕ್ರಿಯೆ ಪ್ರಾರಂಭಿಸಬೇಕೆಂದು ಅಭಿಪ್ರಾಯ ಪಟ್ಟರು.<br><br>ಸಿಂಡಿಕೇಟ್ ನಿರ್ಣಯ:<br>ಚರ್ಚೆಯ ನಂತರ ವಿಷಯದ ಪರಿಗಣನೆಯನ್ನು ಕೈಬಿಡಲು ತೀರ್ಮಾನಿಸಲಾಯಿತು.<br><br>(ಕ್ರಮ: ಕುಲಸಚಿವರು) |
| ವಿಷಯ ಸಂಖ್ಯೆ-17 | (1) ಅಖಿಲ ಭಾರತ ವಿಶ್ವವಿದ್ಯಾಲಯಗಳ ಹಾಕಿ ಪಂದ್ಯಾಟದಲ್ಲಿ ರಾಷ್ಟ್ರೀಯ ಚಾಂಪಿಯನ್ ಟ್ರೋಫಿಗಳಿಸಿದ ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಹಾಕಿ ಆಟಗಾರರಿಗೆ ನಗದು ಬಹುಮಾನ ಮಂಜೂರಿಸುವ ಕುರಿತು ಹಾಗೂ ಅವರಿಗೆ ಎಲ್ಲಾ ತರಹದ ಶುಲ್ಕಗಳಿಂದ ವಿನಾಯಿತಿ ನೀಡುವ ಕುರಿತು.<br><br>(2) ಬೆಂಗಳೂರು ವಿಶ್ವವಿದ್ಯಾಲಯದ ನಿಯಮಾವಳಿಗಳ ಪ್ರಕಾರ ಅಖಿಲ ಭಾರತ ಮಟ್ಟದ ಹಾಗೂ ರಾಷ್ಟ್ರೀಯ ಪಂದ್ಯಾಟಗಳಲ್ಲಿ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನ ಪಡೆದ ಕ್ರೀಡಾಪಟುಗಳಿಗೆ ನಗದು ಬಹುಮಾನ ನೀಡುವ ಕುರಿತು.<br>ಸಿಂಡಿಕೇಟ್ ನಿರ್ಣಯ:<br><br>1. 'ಖೇಲೋ ಇಂಡಿಯಾ" ಕ್ರೀಡಾ ಕೂಟದಲ್ಲಿ ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಹಾಕಿ ತಂಡ ರಾಷ್ಟ್ರೀಯ ಚಾಂಪಿಯನ್ ರಾಗಿ ಜಯಗಳಿಸಿ ಸುವರ್ಣ ಪದಕ ಪಡೆದಿರುವುದಕ್ಕೆ ಸಭೆ ಸಂತೋಷ ವ್ಯಕ್ತಪಡಿಸಿ ಸರ್ವಾನುಮತದ ಅಭಿನಂದನೆಗಳನ್ನು ಸಲ್ಲಿಸಿತು.<br>2. ತಂಡದ ಪ್ರತಿ ಆಟಗಾರರು, ಕೋಚ್ ಮತ್ತು ಮ್ಯಾನೇಜರ್‌ಗಳಿಗೆ ತಲಾ ರೂ.25,000/- ಗಳಂತೆ ಒಟ್ಟು ರೂ.4,75,000/-(ರೂಪಾಯಿ ನಾಲ್ಕು ಲಕ್ಷ ಐಪ್ಪತ್ತೈದು ಸಾವಿರ) ಗಳನ್ನು ನಗದು ಬಹುಮಾನವಾಗಿ ಸಿಂಡಿಕೇಟ್ ಸಭೆ ನೀಡಲು ಸರ್ವಾನುಮತದ ಒಪ್ಪಿಗೆ ನೀಡಲಾಯಿತು. |

| | |
|---|---|
| | 3. ನಗದು ಬಹುಮಾನದ ದರಗಳ ಕುರಿತು ಬೆಂಗಳೂರು ವಿಶ್ವವಿದ್ಯಾಲಯ ನಿಗದಿ ಪಡಿಸಿದ ಕೆಳಕಂಡ ದರಗಳನ್ನು ಅಳವಡಿಸಿಕೊಳ್ಳಲು ಸಿಂಡಿಕೇಟ್ ಸಭೆ ಒಪ್ಪಿಗೆ ನೀಡಿತು: |

| ಪಂದ್ಯಾಟ | ಸ್ಥಾನ | ನಗದು ಬಹುಮಾನ |
|---|---|---|
| ಅಖಿಲ ಭಾರತ ಪಂದ್ಯಾಟಗಳಲ್ಲಿ ಭಾಗವಹಿಸಿರುವ ಕ್ರೀಡಾಪಟುಗಳಿಗೆ | ಪ್ರಥಮ | ರೂ.20,000/- |
| | ದ್ವಿತೀಯ | ರೂ.15,000/- |
| | ತೃತೀಯ | ರೂ.10,000/- |
| ದಕ್ಷಿಣ ವಲಯ | ಪ್ರಥಮ | ರೂ.07,000/- |
| | ದ್ವಿತೀಯ | ರೂ.05,000/- |
| ಅಂತರರಾಷ್ಟ್ರೀಯ ಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸುವ ಕ್ರೀಡಾಪಟುಗಳಿಗೆ | ಪ್ರಥಮ | ರೂ.20,000/- |

ಒಬ್ಬ ವಿಶ್ವವಿದ್ಯಾಲಯದ ಪೂರ್ಣಕಾಲಿಕ ಅಧ್ಯಾಪಕರಿಗೆ ದೈಹಿಕ ಶಿಕ್ಷಣ ನಿರ್ದೇಶಕರ ಹುದ್ದೆಯ ಪ್ರಭಾರ ವಹಿಸ ಬೇಕೆಂದು ಸಭೆ ತೀರ್ಮಾನಿಸಿತು ಹಾಗೂ ಅವರು ಆ ಪದನಾಮದಿಂದ ಪತ್ರವ್ಯವಹಾರ ಮಾಡಬೇಕೆಂದು ಸೂಚಿಸಲಾಯಿತು.

(ಕ್ರಮ: ಕುಲಸಚಿವರು, ವಿತ್ತಾಧಿಕಾರಿಗಳು ಹಾಗೂ ದೈಹಿಕ ಶಿಕ್ಷಣ ನಿರ್ದೇಶಕರು)

| | |
|---|---|
| ವಿಷಯ ಸಂಖ್ಯೆ–18 | ಕಛೇರಿ ಸಿಬ್ಬಂದಿಗಳು ಹೆಚ್ಚುವರಿಯಾಗಿ ಕಾರ್ಯ ನಿರ್ವಹಿಸಿದಾಗ ಸಂಭಾವನೆಯನ್ನು ನೀಡುವ ಬಗ್ಗೆ<br>ಸಿಂಡಿಕೇಟ್ ನಿರ್ಣಯ:<br>ತಿರಸ್ಕರಿಸಲಾಯಿತು.<br>(ಕ್ರಮ: ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ) ಹಾಗೂ ವಿತ್ತಾಧಿಕಾರಿಗಳು) |
| ವಿಷಯ ಸಂಖ್ಯೆ–19 | ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ವಿವಿಧ ವಿಭಾಗ/ಕಛೇರಿಗಳಿಗೆ ಬೇಕಾಗಿರುವ ವಿವಿಧ ವೃಂದದ ಸಿಬ್ಬಂದಿಗಳನ್ನು ಹೊರಗುತ್ತಿಗೆಯಲ್ಲಿ ಕೆ.ಟಿ.ಪಿ.ಪಿ. ಕಾಯ್ದೆಯಡಿ 4'ಜಿ' ಯಿಂದ ವಿನಾಯತಿ ಪಡೆದಿರುವ ಕಿಯೋನಿಕ್ಸ್ ಸಂಸ್ಥೆಯಿಂದ ಪಡೆಯುವ ಬಗ್ಗೆ<br>ಸಿಂಡಿಕೇಟ್ ನಿರ್ಣಯ:<br>ಪ್ರಸ್ತಾವನೆಗೆ ಒಪ್ಪಿಗೆ ಸೂಚಿಸಿ, ಒಟ್ಟು 74 ವಿವಿಧ ವೃಂದದ ಹುದ್ದೆಗಳಿಗೆ, ಹೊರಗುತ್ತಿಗೆ ಆಧಾರದ ಮೇಲೆ ಕಿಯೋನಿಕ್ಸ್ ಸಂಸ್ಥೆಯಿಂದ ಒಂದು ವರ್ಷದ ಅವಧಿಗೆ ಅಥವಾ ಅವರು 4'ಜಿ' ಯಿಂದ ವಿನಾಯತಿ ಪಡೆದಿರುವ ಅವಧಿಗೆ ಅಥವಾ ನೇರ ನೇಮಕಾತಿ / ಬಡ್ತಿ ಮೂಲಕ ನೇಮಕಾತಿಯಾಗುವ ವರೆಗೆ ಅಥವಾ ಒಂದು ತಿಂಗಳು ನೋಟೀಸ್ ನೀಡಿ ಒಪ್ಪಂದ ರದ್ದು ಪಡಿಸುವ ಶರತ್ತು ವಿಧಿಸಿ ಕಿಯೋನಿಕ್ಸ್ ಸಂಸ್ಥೆಯಿಂದ ಸೇವೆ ಪಡೆಯಲು ಹಾಗೂ ವಾರ್ಷಿಕ ರೂ.1,93,18,980/-(ಒಂದು ಕೋಟಿ ತೊಂಬತ್ತಮೂರು ಲಕ್ಷ ಹದಿನೆಂಟು ಸಾವಿರದ ಒಂಬತ್ತುನೂರ ಎಂಭತ್ತು ರೂಪಾಯಿ) ಗಳ ವೆಚ್ಚಕ್ಕೆ |

| | |
|---|---|
| | ಅನುಮೋದನೆ ನೀಡಲು ಒಪ್ಪಿಗೆ ಸೂಚಿಸಲಾಯಿತು. ಜೊತೆ ಜೊತೆಗೆ ಟೆಂಡರ್ ಪ್ರಕ್ರಿಯೆ ಸಹ ಪ್ರಾರಂಭಿಸ ಬೇಕು ಎಂದು ತೀರ್ಮಾನಿಸಲಾಯಿತು. ಉಳಿದ ಹುದ್ದೆಗಳನ್ನು ಅಗತ್ಯಕ್ಕೆ ಅನುಗುಣವಾಗಿ ಸಮಾಲೋಚಕರ ಆಧಾರದ ಮೇಲೆ ಸೇವೆ ಪಡೆಯಲು ತೀರ್ಮಾನಿಸಲಾಯಿತು.<br>{ಕ್ರಮ: ಕುಲಸಚಿವರು, ವಿತ್ತಾಧಿಕಾರಿಗಳು ಹಾಗೂ ಕುಲಸಚಿವರು (ಮೌಲ್ಯಮಾಪನ)} |
| ವಿಷಯ ಸಂಖ್ಯೆ-20 | ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ವಿತ್ತಾಧಿಕಾರಿಗಳ ಅಧಿಕೃತ ಸಾರಿಗೆ ಸೌಲಭ್ಯಕ್ಕಾಗಿ ಒಂದು ನೂತನ ಲಘು ವಾಹನವನ್ನು ಖರೀದಿಸಲು ಅನುಮೋದನೆಗಾಗಿ.<br>**ಸಿಂಡಿಕೇಟ್ ನಿರ್ಣಯ:**<br>ವಿತ್ತಾಧಿಕಾರಿಗಳಿಗೆ ಒಂದು ಲಘು ವಾಹನವನ್ನು ವಿಶ್ವವಿದ್ಯಾಲಯದ ಸಂಪನ್ಮೂಲದಿಂದ ರೂ. **9.00** ಲಕ್ಷಗಳು **(Ex-Showroom Price)** ಮೊತ್ತಕ್ಕೆ ಖರೀದಿಸಲು ಸರ್ಕಾರದ ಅನುಮತಿ ಕೋರಲು ತೀರ್ಮಾನಿಸಲಾಯಿತು.<br>(ಕ್ರಮ: ಕುಲಸಚಿವರು ಹಾಗೂ ವಿತ್ತಾಧಿಕಾರಿಗಳು) |
| ವಿಷಯ ಸಂಖ್ಯೆ-21 | ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಅಭಿಯಂತರರ ವಿಭಾಗದ ಹೊರಗುತ್ತಿಗೆ ಸಹಾಯಕ ಅಭಿಯಂತರರಾದ ಶ್ರೀಮತಿ ಅಶ್ವಿನಿ ಎಸ್ ರವರ ವೇತನ ಹೆಚ್ಚಳಕ್ಕೆ ಕೋರಿಕೆ.<br>**ಸಿಂಡಿಕೇಟ್ ನಿರ್ಣಯ:**<br>ವಿಷಯವನ್ನು ಕೈಬಿಡಲು ತೀರ್ಮಾನಿಸಲಾಯಿತು.<br>(ಕ್ರಮ: ಕುಲಸಚಿವರು ಹಾಗೂ ವಿತ್ತಾಧಿಕಾರಿಗಳು) |
| ವಿಷಯ ಸಂಖ್ಯೆ-22 | ಸ್ವಚ್ಛತಾ ಕಾರ್ಯಗಳಿಗೆ ಮೆ: ಟೋಟಲ್ ಸೆಲ್ಯುಷನ್ಸ್ ಅವರಿಗೆ ನೀಡಿರುವ ಗುತ್ತಿಗೆ ಅವಧಿಯನ್ನು ದಿನಾಂಕ 01.04.2020 ರಿಂದ ಮುಂದುವರೆಸುವ ಬಗ್ಗೆ.<br>**ಸಿಂಡಿಕೇಟ್ ನಿರ್ಣಯ:**<br>ಸ್ವಚ್ಛತಾ ಕಾರ್ಯಗಳಿಗೆ ಮೆ: ಟೋಟಲ್ ಸೆಲ್ಯುಷನ್ಸ್ ರವರಿಗೆ ನೀಡಿರುವ ಗುತ್ತಿಗೆ ಅವಧಿಯನ್ನು ದಿನಾಂಕ **30.06.2020** ರ ವರೆಗೆ ಮುಂದುವರೆಸಲು ತೀರ್ಮಾನಿಸಲಾಯಿತು. ಈ ಕುರಿತು ಟೆಂಡರ್‌ಗಳನ್ನು ತೆರೆದು ಕ್ರಮ ಕೈಕೊಳ್ಳಲು ಸೂಚಿಸಲಾಯಿತು.<br>(ಕ್ರಮ: ಕುಲಸಚಿವರು) |
| ವಿಷಯ ಸಂಖ್ಯೆ-23 | ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಸೆಂಟ್ರಲ್ ಕಾಲೇಜಿನ ಆವರಣದ ಎಲ್ಲಾ ವಿಭಾಗಗಳು / ಕಛೇರಿಗಳಿಗೆ ಕ್ರಿಮಿನಾಶಕ ಸಿಂಪಡಿಸುವ ಬಗ್ಗೆ.<br>**ಸಿಂಡಿಕೇಟ್ ನಿರ್ಣಯ:**<br>ಕೋವಿಡ್-**19** ಸಾಂಕ್ರಾಮಿಕ ಸೋಂಕಿನ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯ ಕೈಗೊಂಡ ಕ್ರಮಗಳನ್ನು ಅನುಮೋದಿಸಿ ತರಗತಿಗಳು ಪ್ರಾರಂಭವಾಗುವ **15** ದಿವಸ ಪೂರ್ವದಲ್ಲಿ ಹಾಗೂ ಪ್ರತಿ ತಿಂಗಳಿಗೆ ಒಂದು ಸಲ ಶನಿವಾರದ ದಿವಸ ತರಗತಿಗಳು ಮುಗಿದ ನಂತರ ಆವರಣದ ಕಟ್ಟಡಗಳ ಒಳ-ಹೊರಗೆ ಹಾಗೂ |

| | |
|---|---|
| | ತರಗತಿಗಳಿಗೆ ಪ್ರತಿ ತಿಂಗಳು ರೂ.37,000(ರೂಪಾಯಿ ಮೂವತ್ತ ಏಳು ಸಾವಿರ) ಗಳ ವೆಚ್ಚದಲ್ಲಿ 6 ತಿಂಗಳ ಅವಧಿಗೆ ಕ್ರಿಮಿನಾಶಕ ಸಿಂಪರಣೆ ಮಾಡಲು ಸಿಂಡಿಕೇಟ್ ಸಭೆ ಸರ್ವಾನುಮತದ ಅನುಮೋದನೆ ನೀಡಿತು.<br>(ಕ್ರಮ: ಕುಲಸಚಿವರು) |
| ವಿಷಯ ಸಂಖ್ಯೆ–24 | ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಅಡಿಯಲ್ಲಿ ಬರುವ ಸಂಶೋಧನಾ ಕೇಂದ್ರಗಳ ಮಾನ್ಯತೆ ಮುಂದುವರೆಸುವ ಕುರಿತು ಪರಿಶೀಲನೆ.<br><br>ಗೌರವಾನ್ವಿತ ಸದಸ್ಯರಾದ ಶ್ರೀ ಕರಣ್‌ಕುಮಾರ್ ರವರು ಮಾತನಾಡಿ ಸಂಶೋಧನಾ ವಿಶ್ವವಿದ್ಯಾಲಯದ ಪ್ರಮುಖ ಕಾರ್ಯಕ್ರಮವಾಗಬೇಕು. ಈ ಕೇಂದ್ರಗಳಿಗೆ ಮಾನ್ಯತೆ ಕೊಟ್ಟಮೇಲೆ ಕೇಂದ್ರ ಸರಿಯಾಗಿ ಸಂಶೋಧನಾ ಕೆಲಸ ನಿರ್ವಹಿಸುವಂತೆ ನೋಡಿಕೊಳ್ಳಬೇಕು. ಹಾಗೂ Post Doctoral Research ಕೆಲಸ ನಡೆಯಲು ಅವಕಾಶ ಕಾಲಕಾಲಕ್ಕೆ ಕಲ್ಪಿಸಬೇಕು, ಕೇಂದ್ರದ ಮಾನ್ಯತೆ ನವೀಕರಣವಾಗಬೇಕು ಎಂದು ತಿಳಿಸಿದರು.<br><br>ಗೌರವಾನ್ವಿತ ಸದಸ್ಯರಾದ ಡಾ: ಆರ್. ಪಾರ್ವತಿ ಅವರು ಮಾತನಾಡಿ, ಈ ಸಂಶೋಧನಾ ಕೇಂದ್ರಗಳು, ಬೆಂಗಳೂರು ವಿಶ್ವವಿದ್ಯಾಲಯದಿಂದ ಮಾನ್ಯತೆಹೊಂದಿ ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬಂದಿರುವ ಸಂಶೋಧನಾ ಕೇಂದ್ರಗಳಾಗಿವೆ. ಇವುಗಳಿಗೆ ಮಾನ್ಯತೆ ನವೀಕರಣ ನೀಡಬೇಕಾಗಿದೆ ಎಂದು ತಿಳಿಸಿದರು.<br><br>ಗೌರವಾನ್ವಿತ ಸದಸ್ಯರಾದ ಡಾ: ಹೆಚ್.ಟಿ. ಅರವಿಂದ್ ರವರು, ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಈ ಸಂಶೋಧನಾ ಕೇಂದ್ರಗಳ ತನಿಖೆಗೆ ನಿವೃತ್ತ ಕುಲಪತಿಗಳ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗುತ್ತದೆ. ಹೊಸದಾಗಿ ಸಿದ್ದಪಡಿಸಬೇಕಾದ Parameter ಗಳನ್ನು ನಂತರ ಪರಿಗಣಿಸಬಹುದು ಸಧ್ಯಕ್ಕೆ ಈಗಿರುವ ನಮೂನೆಯಂತೆ ತನಿಖೆ ನಡೆಸಲು ಕೂಡಲೆ ಸಮಿತಿ ರಚಿಸಿ ವರದಿ ಪಡೆಯ ಬೇಕು ಎಂದು ತಿಳಿಸಿದರು.<br><br>ಗೌರವಾನ್ವಿತ ಸದಸ್ಯರಾದ ಡಾ. ಬಿ.ಎ. ಅನುರಾಧಾ ರವರು, ಈ ಕೇಂದ್ರಗಳು ಪೂರ್ವಾನ್ವಯವಾಗಿ ಮಾನ್ಯತೆ ನವೀಕರಣ ಹೊಂದಬೇಕಾಗಿದೆ ಎಂದು ತಿಳಿಸಿದರು. ವಿದ್ಯಾರ್ಥಿಗಳ ಹಿತವನ್ನು ಗಮನದಲ್ಲಿರಿಸಿಕೊಂಡು ತೀರ್ಮಾನ ಕೈಗೊಳ್ಳಬೇಕೆಂದು ತಿಳಿಸಿದರು.<br><br>ಸಿಂಡಿಕೇಟ್ ನಿರ್ಣಯ:<br><br>ಮಾನ್ಯತೆ ನವೀಕರಣ, ಬಾಕಿ ಇರುವ ಸಂಶೋಧನಾ ಕೇಂದ್ರಗಳಿಗೆ ತನಿಖೆ ನಡೆಸಿ ವರದಿ ಸಲ್ಲಿಸಲು ನಿವೃತ್ತ ಕುಲಪತಿಗಳ ಅಧ್ಯಕ್ಷತೆಯಲ್ಲಿ 3 ಸಮಿತಿಗಳನ್ನು ರಚಿಸಲು ಹಾಗೂ ಈ ಸಮಿತಿಗಳಲ್ಲಿ ಒಬ್ಬ ವಿಷಯ ತಜ್ಞರು (ಪ್ರತಿ ವಿಷಯಕ್ಕೆ), ಒಬ್ಬ ಸಿಂಡಿಕೇಟ್ ಸದಸ್ಯರು, ಒಬ್ಬ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು ಹಾಗೂ ಸಂಚಾಲಕರನ್ನು ನೇಮಕ ಮಾಡಲು ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.<br>(ಕ್ರಮ: ಕುಲಸಚಿವರು) |

| | |
|---|---|
| ವಿಷಯ ಸಂಖ್ಯೆ–25 | ವಿಶ್ವವಿದ್ಯಾಲಯದ ಆವರಣದ ಸುತ್ತಮುತ್ತಲಿನ ಸ್ವಚ್ಛತಾ ಕಾರ್ಯಕ್ಕಾಗಿ ಸಂಚಿತ ಸಂಭಾವನೆಯಲ್ಲಿ ನೌಕರರ ಸೇವೆಯನ್ನು ದಿನಾಂಕ: 01.03.2020 ರಿಂದ 30.06.2020 ರವರೆಗೆ ಪಡೆದಿರುವುದಕ್ಕೆ ಘಟನೋತ್ತರ ಅನುಮೋದನೆಗೆ – ಬಗ್ಗೆ.<br>**ಸಿಂಡಿಕೇಟ್ ನಿರ್ಣಯ:**<br>**ವಿಶ್ವವಿದ್ಯಾಲಯದ ಆವರಣದ ಸುತ್ತಮುತ್ತಲಿನ ಸ್ವಚ್ಛತಾ ಕಾರ್ಯಕ್ಕಾಗಿ ಸಂಚಿತ ಸಂಭಾವನೆಯಲ್ಲಿ ಕೆಲಸ ನಿರ್ವಹಿಸುವವರ ಸೇವೆಯನ್ನು ದಿನಾಂಕ 30.06.2020 ರವರೆಗೆ ಮುಂದುವರೆಸಲು ಘಟನೋತ್ತರ ಅನುಮೋದನೆ ನೀಡಲು ತೀರ್ಮಾನಿಸಲಾಯಿತು.**<br>**(ಕ್ರಮ: ಕುಲಸಚಿವರು)** |
| ವಿಷಯ ಸಂಖ್ಯೆ–26 | ಕಾಲೇಜುಗಳ ಸಂಯೋಜನೆ ಬಗ್ಗೆ ಪರಿನಿಯಮಗಳನ್ನು ಪರಿಗಣಿಸುವ ಕುರಿತು.<br>**ಸಿಂಡಿಕೇಟ್ ನಿರ್ಣಯ:**<br>**ಪರಿನಿಯಮಗಳ ರಚನಾ ಸಮಿತಿ ಪರಿಶೀಲನೆಗೆ ಸಲ್ಲಿಸಲು ತೀರ್ಮಾನಿಸಲಾಯಿತು.**<br>**(ಕ್ರಮ: ಕುಲಸಚಿವರು)** |
| ವಿಷಯ ಸಂಖ್ಯೆ–27 | To consider filing an FIR against Charan's B.Ed College for submitting Fake notification of NCTE, New Delhi.<br>**ಸಿಂಡಿಕೇಟ್ ನಿರ್ಣಯ:**<br>**AICTE ಸೂಚನೆಯಂತೆ FIR ದಾಖಲಿಸಲು ಅನುಮೋದನೆ ನೀಡಲಾಯಿತು.**<br>**(ಕ್ರಮ: ಕುಲಸಚಿವರು ಹಾಗೂ ಕಾನೂನು ಸಲಹೆಗಾರರು)** |
| ವಿಷಯ ಸಂಖ್ಯೆ–28 | ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಮುಂದಿನ ಜುಲೈ / ಆಗಸ್ಟ್‌ನ ಮತ್ತು 2020–21 ನೇ ಶೈಕ್ಷಣಿಕ ಸಾಲಿನ ಸ್ನಾತಕ, ಸ್ನಾತಕೋತ್ತರ ಮತ್ತು ಡಿಪ್ಲೊಮಾ ಪರೀಕ್ಷೆಗಳ ಪ್ರಶ್ನೆಪತ್ರಿಕೆಗಳ ಮುದ್ರಣ ಕಾರ್ಯದ ಅಗತ್ಯ ಪ್ರಕ್ರಿಯೆಗಳನ್ನು ಕೈಗೊಳ್ಳುವ ಕುರಿತು ಅನುಮೋದನೆಗಾಗಿ.<br>**ಸಿಂಡಿಕೇಟ್ ನಿರ್ಣಯ:**<br>**ಪ್ರಸ್ತಾವನೆಯಲ್ಲಿ ತಿಳಿಸಿದಂತೆ ದರ ನಿಗದಿಪಡಿಸಿಕೊಳ್ಳಲು ಅನುಮೋದನೆ ನೀಡಲಾಯಿತು.**<br>**{ಕ್ರಮ: ಕುಲಸಚಿವರು ಹಾಗೂ ಕುಲಸಚಿವರು (ಮೌಲ್ಯಮಾಪನ)}** |

ಕುಲಸಚಿವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು

ಸಹಿ/–
ಕುಲಸಚಿವರು

ಸಹಿ/–
ಕುಲಪತಿಗಳು

ಕುಲಸಚಿವರು
ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ

To examine filing an FIR against [illegible] College for submitting Fake notification of NCTE, New Delhi.